(02) 01.03.2016 / 11.10 / MGN-HVR

# ಕರ್ನಾಟಕ ವಿಧಾನ ಪರಿಷತ್ತು

***ಮಂಗಳವಾರ, 01ನೇ ಮಾರ್ಚ್ 2016***

**ಸದನವು ವಿಧಾನ ಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ ಪೂರ್ವಾಹ್ನ 11 ಗಂಟೆ 18 ನಿಮಿಷಕ್ಕೆ ಸಮಾವೇಶಗೊಂಡಿತು.**

**ಸಭಾಪತಿ (ಶ್ರೀ ಡಿ.ಎಚ್.ಶಂಕರಮೂರ್ತಿ) ಅವರು ಪೀಠದಲ್ಲಿ ಉಪಸ್ಥಿತರಿದ್ದರು.**

~~~~~~

unedited copy
~~~~~~

**ಸಭಾಪತಿಯವರು:–** ನಿನ್ನೆ ದಿವಸ ನಾನು ಸದನಕ್ಕೆ ತಿಳಿಸಿದಂತೆ ನಮ್ಮ ಸದನಕ್ಕೆ 25 ಜನ ಸದಸ್ಯರು ಹೊಸದಾಗಿ ಚುನಾಯಿತರಾಗಿದ್ದಾರೆ. ಅವರಲ್ಲಿ ಕೆಲವರು ಮರು ಆಯ್ಕೆಯಾಗಿ ಬಂದಿದ್ದಾರೆ.

**ಶ್ರೀ ಗೋ.ಮದುಸೂಧನ್:–** ಮಾನ್ಯ ಸಭಾಪತಿಯವರೆ, ಪಾಯಿಂಟ್ ಆಫ್ ಆರ್ಡರ್. ಮಾನ್ಯ ಸಭಾನಾಯಕರು ತಮ್ಮ ಸ್ಥಾನವನ್ನು ಬಿಟ್ಟು ಹಿಂದೆ ಹೋಗಿ ಕುಳಿತಿದ್ದಾರೆ.

**ಸಭಾಪತಿಯವರು:–** ಒಂದು ನಿಮಿಷ ಸುಮ್ಮನಿರಿ. ಎಲ್ಲದಕ್ಕೂ ಬಾಯಿ ಹಾಕುವುದು ಒಳ್ಳೆಯ ಅಭ್ಯಾಸವಲ್ಲ. ಸಭಾಪತಿ ಮಾತನಾಡುವಾಗಲೂ ಮಾತನಾಡುತ್ತೀರಿ. ಸ್ವಲ್ಪ ಗಾಂಭೀರ್ಯವಿರಲಿ.

**ಶ್ರೀ ರಾಮಚಂದ್ರಗೌಡ:–** ಮಾನ್ಯ ಸಭಾಪತಿಯವರೆ, ಮಾನ್ಯ ಸಭಾ ನಾಯಕರು....

**ಸಭಾಪತಿಯವರು:–** ಮಾನ್ಯ ರಾಮಚಂದ್ರಗೌಡರೆ, ನಾನು ಸಭಾಪತಿಯಾಗಿ ಮಾತನಾಡುತ್ತಿದ್ದೇನೆ. ನಾನು ಮಾತನಾಡುವಂತಹ ಸಮಯದಲ್ಲಿ ಮಧ್ಯದಲ್ಲಿ ಮಾತನಾಡಬೇಡಿ. ನಾನು ಮಾತನಾಡಿ ಮುಗಿಸಿದ ಮೇಲೆ ಮಾತನಾಡಿ. ದಯವಿಟ್ಟು ಕುಳಿತುಕೊಳ್ಳಿ.

ಈಗ ಹೊಸದಾಗಿ 25 ಜನರು ವಿಧಾನ ಪರಿಷತ್ತಿಗೆ ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾಗಿ ಬಂದಿದ್ದಾರೆ. ಅದರಲ್ಲಿ ಕೆಲವು ಸದಸ್ಯರು ಮರು ಆಯ್ಕೆಯಾಗಿ ಬಂದಿದ್ದಾರೆ. ಇನ್ನು ಕೆಲವರು ಹಿಂದೆ ನಮ್ಮ ಸದನದ ಸದಸ್ಯರಾಗಿದ್ದವರು ಹಾಗೂ ಬೇರೆ ಬೇರೆ ಸ್ಥಾನದಲ್ಲಿದ್ದವರು ಸಹ ಗೆದ್ದು ಬಂದಿದ್ದಾರೆ. ಕೆಲವರು ಮೊದಲ ಬಾರಿಗೆ ಚುನಾಯಿತ ಪ್ರತಿನಿಧಿಗಳಾಗಿ ವಿಧಾನ ಮಂಡಲದೊಳಗೆ ಬರುತ್ತಿದ್ದಾರೆ. ಹಾಗಾಗಿ ನಾನು ಪ್ರತಿಯೊಬ್ಬರ ಹೆಸರನ್ನು ಹಾಗೂ ಅವರು ಯಾವ ಊರಿನಿಂದ ಬಂದಿದ್ದಾರೆಂದು ಹೇಳುತ್ತೇನೆ. ದಯಮಾಡಿ ಅವರು ಎದ್ದು ನಿಂತುಕೊಳ್ಳಬೇಕು. ಅವರನ್ನು ನಾನು ಪರಿಚಯ ಮಾಡಿಕೊಡುತ್ತೇನೆ. ಅದಕ್ಕೆ ಮಾನ್ಯ ಸದಸ್ಯರೆಲ್ಲರೂ ಸಹಕರಿಸಬೇಕೆಂದು ಕೋರುತ್ತೇನೆ.

unedited copy

| | | |
|---|---|---|
| 01. | ಎಸ್.ಆರ್.ಪಾಟೀಲ್ | ಬಿಜಾಪುರ |
| 02. | ವಿಜಯ್ ಸಿಂಗ್ | ಬೀದರ್ |
| 03. | ಬಿ.ಜಿ.ಪಾಟೀಲ್ | ಗುಲ್ಬರ್ಗಾ |
| 04. | ಬಸವನಗೌಡ ಆರ್ ಪಾಟೀಲ್(ಯತ್ನಾಳ್) | ಬಿಜಾಪುರ |
| 05. | ಕವಟಗಿಮಠ ಮಹಾಂತೇಶ್ ಮಲ್ಲಿಕಾರ್ಜುನ | ಬೆಳಗಾಂ |
| 06. | ವಿವೇಕ್‌ರಾವ್ ವಸಂತರಾವ್ ಪಾಟೀಲ್ | ಬೆಳಗಾಂ |
| 07. | ಶ್ರೀಕಾಂತ ಲಕ್ಷ್ಮಣ ಘೋಟ್ನೇಕರ್ | ಉತ್ತರ ಕನ್ನಡ |
| 08. | ಶ್ರೀನಿವಾಸ ಮಾನೆ | ಧಾರವಾಡ |
| 09. | ಪ್ರದೀಪ್ ಶೆಟ್ಟರ್ | ಧಾರವಾಡ |
| 10. | ಬಸವರಾಜ್ ಪಾಟೀಲ್ ಇಟಗಿ | ರಾಯಚೂರ್ |
| 11. | ಕೆ.ಸಿ.ಕೊಂಡಯ್ಯ | ಬಳ್ಳಾರಿ |
| 12. | ಆರ್.ಪ್ರಸನ್ನ ಕುಮಾರ್ | ಶಿವಮೊಗ್ಗ |
| 13. | ಕೋಟಾ ಶ್ರೀನಿವಾಸ ಪೂಜಾರಿ | ದಕ್ಷಿಣ ಕನ್ನಡ |
| 14. | ಎಂ.ಕೆ.ಪ್ರಾಣೇಶ್ | ಚಿಕ್ಕಮಗಳೂರು |
| 15. | ಎಂ.ಎ.ಗೋಪಾಲಸ್ವಾಮಿ | ಹಾಸನ |
| 16. | ಕಾಂತರಾಜು(ಬಿಎಂಎಲ್) | ತುಮಕೂರು |
| 17. | ಎಂ.ನಾರಾಯಣಸ್ವಾಮಿ | ಬೆಂಗಳೂರು |
| 18. | ಸುನೀಲ್ ಸುಬ್ರಮಣಿ | ಕೊಡಗು |
| 19. | ಎಸ್.ನಾಗರಾಜ್(ಸಂದೇಶ್ ನಾಗರಾಜ್) | ಮೈಸೂರು |
| 20. | ಜಿ.ರಘು ಆಚಾರ್ | ಚಿತ್ರದುರ್ಗ |
| 21. | ಕೆ.ಪ್ರತಾಪಚಂದ್ರ ಶೆಟ್ಟಿ | ದಕ್ಷಿಣ ಕನ್ನಡ |
| 22. | ಅಪ್ಪಾಜಿಗೌಡ ಎನ್ | ಮಂಡ್ಯ |
| 23. | ಎಸ್.ರವಿ | ಬೆಂಗಳೂರು ಗ್ರಾಮಾಂತರ |
| 24. | ಸಿ.ಆರ್.ಮನೋಹರ್ | ಕೋಲಾರ |
| 25. | ಆರ್.ಧರ್ಮಸೇನ | ಮೈಸೂರು |

ಸದನದಲ್ಲಿ ಗೈರು ಹಾಜರಾಗಿರುವ ಸದಸ್ಯರುಗಳ ಹೆಸರುಗಳನ್ನು ಸಹಾ ಹೇಳಿರುವುದರಿಂದ ಅವರನ್ನು ಪುನಃ ಸದನಕ್ಕೆ ಪರಿಚಯಿಸುವುದಿಲ್ಲ.

unedited copy

# ಪ್ರಕಟಣೆ

**ಸಭಾಪತಿಯವರು:**

ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮ 2(1)ರ ರೀತ್ಯಾ ಮಾನ್ಯ ಮುಖ್ಯಮಂತ್ರಿಯವರು, ಮಾನ್ಯ ಯೋಜನೆ ಮತ್ತು ಸಾಂಖ್ಯಿಕ ಹಾಗೂ ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರಾದ ಶ್ರೀ ಎಸ್.ಆರ್.ಪಾಟೀಲ್ ಅವರನ್ನು ವಿಧಾನ ಪರಿಷತ್ತಿನ ಸಭಾನಾಯಕರನ್ನಾಗಿ ನಾಮನಿರ್ದೇಶಿಸಿದ್ದು, ಶ್ರೀ ಎಸ್.ಆರ್.ಪಾಟೀಲ್‌ರವರನ್ನು ವಿಧಾನ ಪರಿಷತ್ತಿನ ಸಭಾ ನಾಯಕರಾಗಿ ಘೋಷಿಸುತ್ತೇನೆ.

ದಯಮಾಡಿ ಮಾನ್ಯ ಸಭಾ ನಾಯಕರು ಪೀಠಗ್ರಹಣ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

**(ಈ ಹಂತದಲ್ಲಿ ಶ್ರೀ ಎಸ್.ಆರ್.ಪಾಟೀಲ್‌ರವರು ಸಭಾ ನಾಯಕರ ಪೀಠವನ್ನಲಂಕರಿಸಿದರು)**

unedited copy

**ಸಂತಾಪನ ಸೂಚನೆ**

**(ಸಂತಾಪ ಸೂಚನೆಯ ಪ್ರತಿಯನ್ನು ಲಗತ್ತಿಸಲಾಗಿದೆ)**

(ಮುಂದು)

unedited copy

**ಶ್ರೀ ಎಸ್.ಆರ್.ಪಾಟೀಲ್(ಸಭಾನಾಯಕರು):–** ಮಾನ್ಯ ಸಭಾಪತಿಗಳೆ, ತಾವು ಮಂಡಿಸಿರುವ ಸಂತಾಪ ಸೂಚನೆ ಗೊತ್ತುವಳಿಯನ್ನು ಬೆಂಬಲಿಸಿ, ನಮ್ಮನ್ನು ಅಗಲಿರುವ ಮಹನೀಯರ ಬಗ್ಗೆ ಸರ್ಕಾರದ ಪರವಾಗಿ ಮಾತನಾಡಲು ಅವಕಾಶ ಕಲ್ಪಿಸಿದಕ್ಕಾಗಿ ತಮಗೆ ತುಂಬು ಹೃದಯದ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. "ಹುಟ್ಟು ಅನಿಶ್ಚಿತ, ಸಾವು ಖಚಿತ" ಈ ಹುಟ್ಟು ಸಾವುಗಳ ಮಧ್ಯೆ ನಾಡು,ನುಡಿಗೆ, ರಾಷ್ಟ್ರದ ಸಮುದಾಯಕ್ಕೆ ತಮ್ಮದೆ ಆದ ಕೊಡುಗೆಯನ್ನು ಕೊಟ್ಟು ಬಾಳಿ ಬದುಕಿ ಅತ್ಯಂತ ಸಂತೋಷದಿಂದ ನಮಗೆ ವಿದಾಯವನ್ನು ಹೇಳಿ ಅವರು ನಗುತ್ತಾ ನಮ್ಮನ್ನು ಅಳಿಸಿ ಹೋಗಿದ್ದಾರೆ. ಇಂತಹ ಮಹನೀಯರ ಬಗ್ಗೆ ಇಂದು ತಾವು ಸಂತಾಪ ಸೂಚನೆಯನ್ನು ಮಂಡಿಸಿದ್ದಿರಿ. ಈ ವಿಷಯವಾಗಿ ಒಬ್ಬೊಬ್ಬರ ಬಗ್ಗೆ ಎರಡು ಮಾತುಗಳನ್ನು ಹೇಳಬಯಸುತ್ತೇನೆ.

ಡಾ:ಎಂ.ಅಕಬರ ಅಲಿಯವರು ಬೆಳಗಾವಿ ಜಿಲ್ಲೆಯವರು. ರಾಜ್ಯದ ಅತ್ಯಂತ ಹಿರಿಯ, ಶ್ರೇಷ್ಠ ಸಾಹಿತಿಗಳು. ಮತ್ತು ಡಾಕ್ಟರೇಟ್ ಪದವಿ ಪಡೆದವರು. ಇಡೀ ಸಾಹಿತ್ಯ ಕ್ಷೇತ್ರವನ್ನು ಶ್ರೀಮಂತಗೊಳಿಸಿದಂತಹ ಅತ್ಯಂತ ದೊಡ್ಡ ಸಾಹಿತಿಗಳು. ಇವರು ಬಹಳಷ್ಟು ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ. ನಾಡಿಗೆ–ನುಡಿಗೆ ತಮ್ಮದೆ ಆದ ಕೊಡುಗೆಯನ್ನು ಕೊಡುವುದರ ಜೊತೆಗೆ ವಿಧಾನ ಪರಿಷತ್ತಿನ ಸದಸ್ಯರಾಗಿ ಸಾರ್ವಜನಿಕ ಬದುಕಿನಲ್ಲಿ ಅತ್ಯಂತ ಮಹತ್ವದ ಕೆಲಸಗಳನ್ನು ಮಾಡಿದ್ದಾರೆ. ಕೇವಲ ನಾಡು–ನುಡಿಗೆ ಕೊಡುಗೆಯನ್ನು ನೀಡುವುದಲ್ಲದೆ ಅತ್ಯಂತ ಉತ್ತಮ ಸಂಸದೀಯಪಟುವಾಗಿ ಸಾರ್ವಜನಿಕ ಬದುಕಿನಲ್ಲಿ ಜನರ ನಿರೀಕ್ಷೆ ಮೀರಿ ಅತ್ಯುತ್ತಮವಾದ ಕೆಲಸಗಳನ್ನು ಮಾಡಿದ್ದಾರೆ. ಅತ್ಯಂತ ಸರಳ, ಸಜ್ಜನ, ಸಾತ್ವಿಕ ರಾಜಕಾರಣಿ ಎಂದು ಅನ್ನಿಸಿಕೊಂಡಂತಹ ಇವರ ಸಾವು ರಾಜ್ಯಕ್ಕೆ ತುಂಬಲಾರದ ನಷ್ಟವನ್ನು ಉಂಟು ಮಾಡಿದೆ.

ಮಾನ್ಯ ಎಚ್.ಜಿ.ಗೋವಿಂದೇಗೌಡರ ಬಗ್ಗೆ ಹೇಳುವುದಾದರೆ, ಸರಳ,ಸಜ್ಜನಿಕೆ ಎನ್ನುವ ಹೆಸರುಗಳು ಬಂದಿರುವುದೆ ಗೋವಿಂದೇಗೌಡರಿಂದ. ಪ್ರಾಮಾಣಿಕತೆಗೆ ಅತ್ಯಂತ ಒತ್ತು ಕೊಟ್ಟಂತಹ ಶ್ರೇಷ್ಠ ರಾಜಕಾರಣಿ ಎಂದು ಹೇಳಬಯಸುತ್ತೇನೆ. ಇವರಿಗೆ 'ಮಲೆನಾಡ ಗಾಂಧಿ' ಎಂದು ಹೇಳಲಾಗುತ್ತದೆ. ರಾಷ್ಟ್ರಪಿತ ಮಹಾತ್ಮಾ ಗಾಂಧಿಯವರನ್ನು ಲಕ್ಷದಲ್ಲಿ ಇಟ್ಟುಕೊಂಡು ಇವರು ಮಲೆನಾಡಿನ ಬದುಕಿನಲ್ಲಿ ಗುರುತಿಸಿಕೊಂಡವರು. ಇವರು ಸ್ವತಂತ್ರ ಸೇನಾನಿಯಾಗಿ ಹೋರಾಟ ಮಾಡಿದ್ದಾರೆ. 'ಬ್ರಿಟಿಷರೆ ಭಾರತವನ್ನು ಬಿಟ್ಟು ತೊಲಗಿ' ಎನ್ನುವ ಚಲೇ ಜಾವೊ' ಚಳುವಳಿಯನ್ನು ಮಹಾತ್ಮ ಗಾಂಧಿಯವರು ಪ್ರಾರಂಭ ಮಾಡಿದರು. ಆ 'ಚಲೇ ಜಾವೊ' ಚಳುವಳಿಯಲ್ಲಿ ಭಾಗವಹಿಸಿ ಸ್ವಾತಂತ್ರ ಹೋರಾಟವನ್ನು ಸೂರ್ಯಮುಳಗದ ಸಾಮ್ರಾಜ್ಯದ ಬ್ರಿಟಿಷರ ವಿರುದ್ಧ

unedited copy

ಹೋರಾಟ ಮಾಡಿದ್ದಾರೆ. ಅದರಲ್ಲಿಯು ಕ್ವಿಟ್ ಇಂಡಿಯಾ ಮೂಮೆಂಟ್‌ನಲ್ಲಿ ಭಾಗವಹಿಸಿದ್ದಾರೆ. ಇಷ್ಟೆ ಅಲ್ಲ, ರೈತ ಪರ ಚಳುವಳಿ ಮಾಡಿದ್ದಾರೆ. ಅನೇಕ ಸ್ಥಳೀಯ ಸಂಸ್ಥೆಗಳ ಪ್ರತಿನಿಧಿಗಳಾಗಿ ಕೆಲಸ ಮಾಡಿದ್ದಾರೆ. ಅಷ್ಟೆ ಅಲ್ಲ ಸಹಕಾರಿ ಸಂಸ್ಥೆಗಳ ಮುಖ್ಯಸ್ಥರಾಗಿ ಕೆಲಸ ಮಾಡಿರುವುದನ್ನು ನಾನು ಇಲ್ಲಿ ಜ್ಞಾಪಿಸಿಕೊಳ್ಳುತ್ತೇನೆ.

(ಮುಂದು)

unedited copy

**ಶ್ರೀ ಎಸ್.ಆರ್. ಪಾಟೀಲ್ (ಮುಂದು)**

ಅವರು ಅತ್ಯಂತ ಪ್ರಾಮಾಣಿಕತೆಯಿಂದ ನಿಷ್ಠೆ ಮತ್ತು ಬದ್ಧತೆಯಿಂದ ಕಾಯಾವಾಚಾಮನಸಾ ಸಾರ್ವಜನಿಕ ಬದುಕಿನಲ್ಲಿ ಸೇವೆ ಮಾಡಿದ್ದನ್ನು ನೆನಪಿಸಿಕೊಳ್ಳುತ್ತೇನೆ. ನಾನು ವಿಧಾನ ಪರಿಷತ್ತಿನ ಸದಸ್ಯನಾದಾಗ ಅವರು ಶಿಕ್ಷಣ ಸಚಿವರಾಗಿದ್ದು, ಅವರ ನೀತಿ ನಿಯತ್ತು ಮತ್ತು ಪ್ರಾಮಾಣಿಕತೆಯನ್ನು ನಿಜವಾಗಿಯೂ ಮೆಚ್ಚಿಕೊಂಡಿದ್ದೇನೆ. ಆ ಸಂದರ್ಭದಲ್ಲಿ ನನಗೆ ಅವರ ಜೊತೆ ಬಹಳ ಸಂಪರ್ಕ ಇತ್ತು. ಬಹುತೇಕ ಇವತ್ತಿನ ತಲೆಮಾರಿನ ಎಲ್ಲಾ ರಾಜಕಾರಣಿಗಳಿಗೆ role model ರಾಗಿ ಆದರ್ಶರಾಗಿದ್ದಾರೆ ಎಂದು ಹೇಳುವುದಕ್ಕೆ ಬಯಸುತ್ತೇನೆ. ಅವರು ಪ್ರಶ್ನಾತೀತ ನಾಯಕರು ಮತ್ತು ಹೋರಾಟದ ಬದುಕಿನಿಂದ ಬಂದವರು. ಬಹುತೇಕ ಇಂತಹ ಕಲುಷಿತ ರಾಜಕಾರಣದಲ್ಲಿ ಅಂತಹವರನ್ನು ಕಾಣುವುದು ಬಹಳ ಅಪರೂಪವಾಗಿದೆ. ಅವರಿಗೆ ನಿಜವಾಗಲೂ ಅರ್ಥಪೂರ್ಣ ಶ್ರದ್ಧಾಂಜಲಿ ಅರ್ಪಿಸಬೇಕಾದರೆ ಅವರು ಬಿಟ್ಟುಹೋದ ಹೆಜ್ಜೆ ಗುರುತುಗಳನ್ನು ಅನುಸರಿಸಿ, ಪ್ರಾಮಾಣಿಕತೆ, ನಿಷ್ಠೆ, ಬದ್ಧತೆ ಮತ್ತು ಜನಪರ ಕಾಳಜಿಯಿಂದ ನಮ್ಮನ್ನು ನಾವು ತೊಡಗಿಸಿಕೊಂಡಾಗ ಮಾತ್ರ ಸಾಧ್ಯ ಎಂದು ಹೇಳುವುದಕ್ಕೆ ಬಯಸುತ್ತೇನೆ. ಅವರ ಅಗಲುವಿಕೆಯು ಗಾಂಧಿವಾದದ ಕೊನೆಯ ಕೊಂಡಿ ಕಳಚಿಬಿದ್ದಿದೆ ಎಂದು ಭಾವಿಸುತ್ತೇನೆ. ಅಂತಹ ಶ್ರೇಷ್ಠ, ಮುತ್ಸದ್ಧಿ, ಕ್ರಿಯಾಶೀಲ ಮತ್ತು ಮಾನವೀಯ ಮೌಲ್ಯಗಳನ್ನು ಹೊಂದಿ ಸಾರ್ವಜನಿಕ ಬದುಕಿನಲ್ಲಿ ಎಲ್ಲವನ್ನು ಅರ್ಥೈಸಿಕೊಂಡ ಒಬ್ಬ ಶ್ರೇಷ್ಠ ರಾಜಕಾರಣಿಯನ್ನು ಕಳೆದುಕೊಂಡು ನಮ್ಮ ನಾಡು ಮತ್ತು ಸಾರ್ವಜನಿಕ ಬದುಕು ಬರಡಾಗಿದೆ ಎಂದು ಭಾವಿಸುತ್ತೇನೆ.

ಇನ್ನು ಶ್ರೀಯುತ ಎಂ.ಎಂ. ನಾಣಯ್ಯನವರು ಮಾಜಿ ವಿಧಾನ ಸಭಾ ಸದಸ್ಯರು ಹಾಗೂ ಸಚಿವರಾಗಿದ್ದರು. ಅವರು ಎರಡು ಬಾರಿ ವಿಧಾನ ಸಭೆ ಪ್ರವೇಶ ಮಾಡಿ ವೃತಿಯಲ್ಲಿ ವಕೀಲರಾಗಿದ್ದು, ಪ್ರವೃತ್ತಿಯಿಂದ ಕೃಷಿಕರಾಗಿದ್ದರು. ನಾನು ಇಂದು ಹೊಂದಿರುವ ಮಾಹಿತಿ, ತಂತ್ರಜ್ಞಾನ ಖಾತೆಯಿಂತೆ ಅವರು ಅಬಕಾರಿ ಮತ್ತು ಮಾಹಿತಿ ತಂತ್ರಜ್ಞಾನ ಸಚಿವರಾಗಿ ಕೆಲಸ ಮಾಡಿದ್ದು, ನಿಷ್ಠಾವಂತಹ ಹಿರಿಯ ಸಜ್ಜನ ರಾಜಕಾರಣಿಯನ್ನು ಕಳೆದುಕೊಂಡು ಸಾರ್ವಜನಿಕ ಬದುಕು ಬರಡಾಗಿದೆ ಎಂದು ಹೇಳಬಯಸುತ್ತೇನೆ.

ಇನ್ನು ಡಾ: ಸಾ.ಶಿ. ಮರುಳಯ್ಯನವರು ನಾಡಿನ ಅತ್ಯಂತ ಹಿರಿಯ ಹಾಗೂ ಶ್ರೇಷ್ಠ ಸಾಹಿತಿಯಾಗಿದ್ದು, ಆರೂವರೆ ಕೋಟಿ ಕನ್ನಡಿಗರ ಏಕೈಕ ಸಾರ್ವಭೌಮ ಸಂಸ್ಥೆಯಾದ ಕನ್ನಡ

unedited copy

ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಕೆಲಸ ಮಾಡಿದವರಾಗಿದ್ದಾರೆ. ಅವರ ನಿಧನ ಸಾಹಿತ್ಯ ಲೋಕ ಮತ್ತು ನಾಡಿಗೆ ದೊಡ್ಡದಾದ ಹಾನಿ ಎಂದು ಹೇಳುವುದಕ್ಕೆ ಬಯಸುತ್ತೇನೆ. ಇವರು ತುಮಕೂರು ಜಿಲ್ಲೆಯವರಾಗಿದ್ದು, ವೃತ್ತಿಯಲ್ಲಿ ಅಧ್ಯಾಪಕರಾಗಿ ಪಿ.ಹೆಚ್.ಡಿ. ಪದವಿ ಪಡೆದು ಶ್ರೇಷ್ಠ ಸಾಹಿತಿಗಳಾಗಿದ್ದು, ಇವರ ಗುರುತಿಲ್ಲದವರು ನಮ್ಮ ರಾಜ್ಯದಲ್ಲಿ ಒಬ್ಬರೂ ಇಲ್ಲ ಎಂದರೆ ತಪ್ಪಾಗಲಿಕ್ಕಿಲ್ಲ. ಅಷ್ಟರಮಟ್ಟಿಗೆ ಜನಪರ ನಿಲುವು, ಸಾಹಿತ್ಯ ಮತ್ತು ಸಮಾಜಕ ಪ್ರತಿಬಿಂಬ ಹಾಗೂ ಓರೆಕೋರೆಗಳನ್ನು ಸರಿಮಾಡಿವಲ್ಲಿ ನಿಷ್ಠಾವಂತರಾಗಿ ಕೆಲಸ ಮಾಡಿದವರಾಗಿದ್ದಾರೆ. ಎಲ್ಲಕ್ಕಿಂತ ಮಿಗಿಲಾಗಿ ಕೆ.ಎ.ಎಸ್ ಮತ್ತು ಐ.ಎ.ಎಸ್ ಪರೀಕ್ಷೆಗಳಿಗೆ ಬೋಧನೆ ಮತ್ತು ಆ ನಿಟ್ಟಿನಲ್ಲಿ ಏನೇನು ಕಲಿಸಬೇಕೋ, ಅದೆಲ್ಲವನ್ನು ಕಲಿಸುತ್ತಿದ್ದರು. ಬಹುತೇಕ ಅವರ ಪುಣ್ಯ ಮತ್ತು ಶ್ರಮದಿಂದ ಬಹಳಷ್ಟು ಕೆ.ಎ.ಎಸ್ ಮತ್ತು ಐ.ಎ.ಎಸ್ ಅಧಿಕಾರಿಗಳು ಸೇವೆ ಸಲ್ಲಿಸುತ್ತಿದ್ದಾರೆ ಎಂದು ತಾವು ಹೇಳಿದ್ದು, ನಾನೂ ಅದರ ಜೊತೆ ಧ್ವನಿಗೂಡಿಸುತ್ತೇನೆ. ಶ್ರೇಷ್ಠ ಕವಿ ಮತ್ತು ಕಾದಂಬರಿಕಾರರಾಗಿ ಕನ್ನಡ ನಾಡಿನ ಕಾದಂಬರಿ ಲೋಕವನ್ನೇ ಶ್ರೀಮಂತಗೊಳಿಸಿದವರಾಗಿದ್ದಾರೆ. ಶ್ರೇಷ್ಠ ಕವನಗಳನ್ನು ಪಡೆದು ಬಹಳಷ್ಟು ಪ್ರತಿಷ್ಠಿತ ಪ್ರಶಸ್ತಿಗಳಿಗೂ ಭಾಜನರಾಗಿದ್ದಾರೆ. ನನಗೆ ಅನಿಸಿದ ಮಟ್ಟಿಗೆ ನಾವೆಲ್ಲರೂ ಅಧಿಕೃತ ಶಾಸಕರೆಂದು ಭಾವಿಸುತ್ತೇವೆ. ಆದರೆ ಸಾಹಿತಿಗಳು ಅನಧಿಕೃತ ಶಾಸಕರಾಗಿದ್ದು, ಸಮಾಜದ ಓರೆಕೋರೆಗಳನ್ನು ಸರಿಮಾಡುವ ಕೆಲಸ, ಸಮಾಜಕ ಪ್ರತಿಬಿಂಬವಾಗಿ ಮತ್ತು ಸಮಾಜ ತಪ್ಪಿ ನಡೆದಾಗ ಅದನ್ನು ಸರಿಮಾಡುವ ಕೆಲಸವನ್ನು ಲೇಖನದ ಮುಖಾಂತರ ಮಾಡುವವರಾಗಿದ್ದು, ಇವರನ್ನು ನಾನು ಶಾಸಕರೆಂದು ಭಾವಿಸುತ್ತಿದ್ದೇನೆ. ಅಂತಹ ಮಹತ್ವದ ಕೆಲಸವನ್ನು ಇವರು ಮಾಡುತ್ತಿದ್ದರು. ಇವರ ಅಗಲುವಿಕೆಯಿಂದ ಸಾಹಿತ್ಯ ಲೋಕವೇ ಒಬ್ಬ ಮೇಧಾವಿಯನ್ನು ಕಳೆದುಕೊಂಡಂತಾಗಿದೆ ಎಂದು ಹೇಳುತ್ತೇನೆ.

ಇನ್ನು ಕನ್ನಡ ಚಲನಚಿತ್ರ ರಂಗದ ಶ್ರೀಯುತ ಗೀತಪ್ರಿಯರವರು ಅತ್ಯಂತ ಯಶಸ್ವಿ ನಿರ್ದೇಶಕರು, ಶ್ರೇಷ್ಠ ಗೀತರಚನಕಾರರು ಆದ ಇವರ ನಿಧನನಿಂದ ಕನ್ನಡ ಚಲನ ಚಿತ್ರ ರಂಗಕ್ಕೆ ದೊಡ್ಡ ಹಾನಿ ಎಂದು ಈ ಸಂದರ್ಭದಲ್ಲಿ ವ್ಯಕ್ತ ಮಾಡುತ್ತೇನೆ. ಇವರು 30ಕ್ಕೂ ಹೆಚ್ಚು ಚಿತ್ರಗಳು ಹಾಗೂ ಸಾವಿರಕ್ಕೂ ಹೆಚ್ಚು ಗೀತೆಗಳನ್ನು ರಚನೆ ಮಾಡಿದ್ದಾರೆ. ಅವರು ಮಣ್ಣಿನ ಮಗ ಚಲನಚಿತ್ರವನ್ನು ಮಾಡಿದ್ದು, ನಮ್ಮ ಕಡೆಗಳಲ್ಲಿ ನಾ ಮಣ್ಣಿನ ಮಗ, ನೀ ಮಣ್ಣಿನ ಮಗ ಎನ್ನುವುದನ್ನು ಕೇಳುತ್ತೇನೆ. ಈ ಚಿತ್ರಕ್ಕೆ ಕೇಂದ್ರ ಮತ್ತು ರಾಜ್ಯ ಪ್ರಶಸ್ತಿಗಳನ್ನು ಪಡೆದಿದೆ. ಇವರು ಅತ್ಯಂತ ಗುಣಮಟ್ಟದ ನಿರ್ದೇಶನವನ್ನು ಮಾಡುತ್ತಿದ್ದು, ಸಮಾಜಕ್ಕೆ ಪಾಠ ಹೇಳುವಂತ ಚಿತ್ರ

unedited copy

ನಿರ್ದೇಶಿಸುವುದರಲ್ಲಿ ಬಹಳಷ್ಟು ಹೆಸರು ಪಡೆದವರಾಗಿದ್ದು, ಇವರ ನಿಧನದಿಂದ ಕನ್ನಡ ಚಲನಚಿತ್ರ ರಂಗ ಅತ್ಯುತ್ತಮ ಗೀತ ರಚನೆಕಾರರೂ ಮತ್ತು ಶ್ರೇಷ್ಠ ನಿರ್ದೇಶಕರನ್ನು ಕಳೆದುಕೊಂಡಂತಾಗಿದೆ ಎಂದು ಹೇಳುವುದಕ್ಕೆ ಬಯಸುತ್ತೇನೆ.

ಇನ್ನು ದಿನಾಂಕ 8/11/2015ರಂದು ಬಂಗಾಳ ಕೊಲ್ಲಿಯಲ್ಲಿ depression ಆಗಿ, ಬಹುತೇಕ ಶತಮಾನದಲ್ಲಿ ಆಗಲಾರದ ಮಳೆ ತಮಿಳುನಾಡಿನಲ್ಲಿ ಅಪಾರ ಪ್ರಾಣ ಹಾನಿ ಮತ್ತು ಆಸ್ತಿಹಾನಿ ಆಗಿದೆ. ಸುಮಾರು ಹತ್ತು ಸಾವಿರಕ್ಕಿಂತ ಹೆಚ್ಚು ಜನ ನಿರ್ಗತಿಕರಾಗಿರುವುದನ್ನು ಬಹಳ ದು:ಖದಿಂದ ಹೇಳುವುದಕ್ಕೆ ಬಯಸುತ್ತೇನೆ. ಇಡೀ ದೇಶವೇ ತಮಿಳುನಾಡಿನತ್ತ ಧಾವಿಸಿ ಬಂದು ಸಹಾಯ ಮಾಡಿದೆ. 200ಕ್ಕೂ ಹೆಚ್ಚು ಜನ ನಿಧನರಾಗಿದ್ದಾರೆ. ಇಂತಹ ಸಂದರ್ಭದಲ್ಲಿ ಮಾನವೀಯತೆಗೆ ಇನ್ನೊಂದು ಹೆಸರೇ ಕರ್ನಾಟಕ ಎಂದು ಭಾವಿಸುತ್ತೇನೆ. ನಮ್ಮ ರಾಜ್ಯದ ನೆರವು ಕೊಡುವಾಗ ಆ ರಾಜ್ಯದ ಮುಖ್ಯಮಂತ್ರಿಗಳು ನಿರಾಕರಿಸಿದರು.

ಸಭಾಪತಿಯವರು:- ನಂತರ ತೆಗೆದುಕೊಂಡರು. Subsequent ಆಗಿ ತೆಗೆದುಕೊಂಡರು.

ಶ್ರೀ ಎಸ್.ಆರ್. ಪಾಟೀಲ್:- ನಂತರ ತೆಗೆದುಕೊಂಡರು. ಹಾಗೆ ಅವರು ಹೇಳಿದ್ದರೂ ಕನ್ನಡ ನಾಡಿನ ಅನೇಕ ಸಂಘ-ಸಂಸ್ಥೆಗಳು, ಪಕ್ಷಗಳು, ಸಂಘಟನಾ ಶಕ್ತಿಗಳು ಬಹಳಷ್ಟು ಸಹಾಯ ಮಾಡಿದ್ದನ್ನು ನೆನಪಿಸಿಕೊಳ್ಳುತ್ತೇನೆ. ಬಹುತೇಕ ಕಾವೇರಿ ನೀರಿನ ಸಲುವಾಗಿ ಬಹಳ ವಾದ ಮಾಡುವಾಗ ಅವರಿಗೆ ಭಗವಂತಹ ಬಹಳಷ್ಟು ನೀರು ಕೊಟ್ಟಿದ್ದಾನೆ ಎಂಬುದರ ಜೊತೆಗೆ ಇತಿಮಿತಿಯಲ್ಲಿರಬೇಕಾಗಿತ್ತು. ಶತಮಾನದಲ್ಲಿ ಆಗಲಾರದಂತಹ ಜಲಪ್ರಳಯವಾಗಿದೆ. ಅವರೂ ಕೂಡ ರಾಷ್ಟ್ರದ ಪ್ರಜೆಗಳಾಗಿದ್ದು, ಅವರಿಗೆ ಆದ ಹಾನಿಯಲ್ಲಿ ನಾವೆಲ್ಲರೂ ಭಾಗಿಯಾಗಿದ್ದೇವೆ ಎಂದು ಹೇಳುವುದಕ್ಕೆ ಬಯಸುತ್ತೇನೆ.

ಇನ್ನು ಪಠಾಣ್ ಕೋಟೆ ವಾಯುನೆಲೆ ಮೇಲೆ ಉಗ್ರರ ದಾಳಿಯಾಗಿ ಮೂರು ಜನ ಯೋಧರು ಹುತಾತ್ಮರಾಗುತ್ತಾರೆ ಮತ್ತು ಇಡೀ ಪ್ರಪಂಚದಲ್ಲಿ ಅತ್ಯಂತ ಎತ್ತರದ ಯುದ್ಧಭೂಮಿಯಾದ ಸಿಯಾಚಿನ್ ಹಿಮಪಾತದಲ್ಲಿ ಹುತಾತ್ಮರಾಗಿದ್ದಾರೆ. Minus 50 degree centigrade ($-50^0$ C) ಕ್ಕೂ ಕಡಿಮೆ ಹೋಗುತ್ತದೆ. I will correct

unedited copy

myself. ಅಂತಹ ಕಡೆ ನಮ್ಮ ದೇಶವನ್ನು ರಕ್ಷಣೆ ಮಾಡುವಲ್ಲಿ ಧಾರವಾಡ ಜಿಲ್ಲೆಯ ಹನುಮಂತಪ್ಪ ಕೊಪ್ಪದ್ ರವರು, ಹಾಸನ ಜಿಲ್ಲೆಯ ನಾಗೇಶ್‌ರವರು ಮತ್ತು ಮೈಸೂರಿನ ಹೆಚ್.ಡಿ ಕೋಟೆಯ ಮಹೇಶ್ ರವರನ್ನು ಕಳೆದುಕೊಂಡಿದ್ದೇವೆ. ಇದರ ಜೊತೆಗೆ ಇನ್ನೂ ಅನೇಕ ಯೋಧರು ಹಿಮಪಾತದಲ್ಲಿ ಸಿಲುಕಿ ಹುತಾತ್ಮರಾದರು. ಶ್ರೀಯುತ ಹನುಮಂತಪ್ಪ ಕೊಪ್ಪದ್ ರವರು ಬದುಕಿ ಉಳಿಯುತ್ತಾರೆ ಎಂದು ಆಸೆ ಇತ್ತು. ಅದಕ್ಕೆ ಬಹಳಷ್ಟು ಶ್ರಮ ಪಟ್ಟರು. ಇಡೀ ರಾಷ್ಟ್ರದ ಜನತೆ ಪಾರ್ಥನೆ ಮಾಡಿದರು. ಆದರೂ ವಿಧಿವಶಾತ್ ಅವರೂ ನಿಧನರಾದರು ಎಂದು ಹೇಳುವುದಕ್ಕೆ ಬಯಸುತ್ತೇನೆ. ಇದರ ಜೊತೆಗೆ ಕಾಶ್ಮೀರದಲ್ಲಿ ಉಗ್ರಗಾಮಿಗಳ ಗುಂಡಿಗೆ ನಮ್ಮ ವಿಜಯಪುರ ಜಿಲ್ಲೆಯ ಸಹದೇವ ಮಾರುತಿ ಮೋರೆರವರ ಜೊತೆ ಕೆಲವು ಯೋಧರು ನಿಧನರಾದರು. ಸಹದೇವ ಮಾರುತಿ ಮೋರೆರವರು ಇಬ್ಬರು ಉಗ್ರಗ್ರಾಮಿಗಳನ್ನು ಗುಂಡಿಟ್ಟು ಕೊಂದರು. ಮೊಟ್ಟಮೊದಲನೆಯದಾಗಿ ಉಗ್ರಗಾಮಿಗಳ ತಾಣದ ಬಗ್ಗೆ ಮಾಹಿತಿ ಬಂದ ತಕ್ಷಣ ಅಲ್ಲಿಗೆ ಪ್ರವೇಶಿಸಿ ಉಗ್ರಗಾಮಿಗಳ ಮೇಲೆ ಮೊದಲು ಗುಂಡು ಹಾರಿಸಿದವರು ನನ್ನ ಜಿಲ್ಲೆಯ ಸಹದೇವ ಮಾರುತಿ ಮೋರೆಯವರಾಗಿದ್ದಾರೆ.

(ಮುಂದು)

unedited copy

(ಸಭಾಪತಿಯವರ ಉಪಸ್ಥಿತಿ)

ಶ್ರೀ ಎಸ್.ಆರ್.ಪಾಟೀಲ್(ಮುಂದುವರೆದದ್ದು):-

ಸನ್ಮಾನ್ಯ ಸಭಾಪತಿಯವರೇ, ಆ ಜಿಲ್ಲೆಯ ಉಸ್ತುವಾರಿ ಸಚಿವರಾದ ಮಾನ್ಯ ಎಂ.ಬಿ.ಪಾಟೀಲ್‌ರವರು, ಇಂಡಿ ತಾಲ್ಲೂಕಿನ ಶಾಸಕರಾದ ಯಶವಂತರಾಯಗೌಡ ವಿಠಲ್‌ಗೌಡ ಪಾಟೀಲ್‌ರು, ಈ ಸದನದ ಸದ್ಯರಾಗಿರುವ ಯತ್ನಾಳ್ ಬಸವನಗೌಡರು ಮತ್ತು ನಾನು ಎಲ್ಲರೂ ಆ ಮೃತ ಯೋಧನ ಅಂತ್ಯಕ್ರಿಯೆಯಲ್ಲಿ ಭಾಗವಹಿಸಿದ್ದೆವು. ಆತನ ದೇಹವನ್ನು ಅನೇಕ ಗುಂಡುಗಳು ಹೊಕ್ಕಿರುವುದನ್ನು ನಾನು ನೋಡಿದೆ.

ಸನ್ಮಾನ್ಯ ಸಭಾಪತಿಯವರೇ, ಈ ದೇಶದ ಭದ್ರತೆ, ಅಖಂಡತೆ, ಸಮಗ್ರತೆ ಮತ್ತು ದೇಶದ ಸಾರ್ವಭೌಮತ್ವವನ್ನು ರಕ್ಷಣೆ ಮಾಡುವ ನಿಟ್ಟಿನಲ್ಲಿ ಹುತಾತ್ಮರಾಗಿರುವ ಈ ಯೋಧರಿಗಾಗಿ ಇಡೀ ಕರ್ನಾಟಕ ರಾಜ್ಯ ಮಾತ್ರವಲ್ಲ, ಇಡೀ ಭಾರತ ದೇಶವೇ ಕಂಬನಿ ಮಿಡಿದಿರುವುದನ್ನು ನಾನಿಲ್ಲಿ ನೆನಪು ಮಾಡಿಕೊಳ್ಳುತ್ತಿದ್ದೇನೆ. ಆ ಯೋಧನ ಅಂತ್ಯಕ್ರಿಯೆಯಲ್ಲಿ ಭಾಗವಹಿಸಿದ ಸಂದರ್ಭದಲ್ಲಿ ಅಲ್ಲಿನ ಜನರ ಭಾವನೆಗಳನ್ನು ಮತ್ತು ರಾಷ್ಟ್ರದ ಪರವಾಗಿ ಘೋಷಣೆ ಕೂಗುವುದನ್ನು ನೋಡಿ ರೋಮಾಂಚನವಾಯಿತು. ಮೃತ ಯೋಧನ ಕುಟುಂಬದ ಆಕ್ರಂದನವನ್ನು ನೋಡುವುದಕ್ಕೆ ನಮ್ಮಿಂದ ಸಾಧ್ಯವಾಗಲಿಲ್ಲ. ಆ ಯೋಧನ ಕುಟುಂಬಕ್ಕೆ ನಾನು ಮತ್ತು ಜಿಲ್ಲಾ ಉಸ್ತುವಾರಿ ಸಚಿವರು ವೈಯಕ್ತಿಕವಾಗಿ ಸಹಾಯ ಮಾಡುವ ಕೆಲಸವನ್ನು ಮಾಡಿದ್ದೇವೆ. ಹೋದ ಜೀವ ಮರಳಿ ಬರುವುದಕ್ಕೆ ಸಾಧ್ಯವಾಗುವುದಿಲ್ಲ. ಆದರೆ, ಇಂತಹ ಸಂದರ್ಭದಲ್ಲಿ ಈ ನಾಡಿನ ಗೌರವಾನ್ವಿತ ಮುಖ್ಯಮಂತ್ರಿಗಳಾದ ಮಾನ್ಯ ಸಿದ್ದರಾಮಯ್ಯನವರು ನಮ್ಮ ರಾಜ್ಯದ ಯೋಧರು ಈ ರಾಷ್ಟ್ರದ ರಕ್ಷಣೆಯ ಕಾರ್ಯದಲ್ಲಿ ತೊಡಗಿದ್ದಾಗ ಹುತಾತ್ಮರಾದರೆ ಅವರ ಕುಟುಂಬಕ್ಕೆ 25 ಲಕ್ಷ ರೂಪಾಯಿಗಳನ್ನು ನೀಡುವುದಾಗಿ ಘೋಷಣೆ ಮಾಡಿದ್ದಾರೆ. ಇದು ಮೆಚ್ಚುವಂತಹ ಘೋಷಣೆಯಾಗಿದೆ. ಇದರ ಜೊತೆಗೆ ಆ ಹುತಾತ್ಮ ಯೋಧರ ಕುಟುಂಬಕ್ಕೆ ಒಂದು ನಿವೇಶನ ಮತ್ತು ಆ ಕುಟುಂಬದ ಒಬ್ಬರಿಗೆ ಉದ್ಯೋಗ ನೀಡುವುದರ ಜೊತೆಗೆ ಉಳುಮೆ ಮಾಡುವುದಕ್ಕಾಗಿ 4 ಎಕರೆ ಜಮೀನನ್ನು ನೀಡುವಂತಹ ನಿರ್ಣಯವನ್ನು ಕೈಗೊಳ್ಳಲಾಗಿದೆ.

unedited copy

ಸನ್ಮಾನ್ಯ ಸಭಾಪತಿಯವರೇ, ಈಗಾಗಲೇ ರಾಜ್ಯದ ವಿವಿಧ ಭಾಗಗಳಿಂದ ಹೋದ ಯೋಧರು ಈ ರಾಷ್ಟ್ರದ ಗಡಿ ರಕ್ಷಣೆ, ದೇಶದ ಏಕತೆ ಮತ್ತು ಭಾವೈಕ್ಯತೆಗೆ ಭಂಗವುಂಟು ಮಾಡಬೇಕೆಂದು ನಮ್ಮ ದೇಶದ ಗಡಿಯೊಳಗೆ ನುಸುಳಿ ಬಂದು ಈ ರಾಷ್ಟ್ರದ ಸಾರ್ವಭೌಮತ್ವಕ್ಕೆ ಸವಾಲು ಹಾಕುವ ಕೆಲಸವನ್ನು ಮಾಡಿದಾಗ, ತಮ್ಮ ಜೀವದ ಹಂಗು ತೊರೆದು ಈ ದೇಶದ ರಕ್ಷಣೆ ಮಾಡುವುದಕ್ಕೆ ಹೋರಾಟ ಮಾಡಿರುವ ಎಲ್ಲರನ್ನು ನಾವು ಈ ದಿನ ನೆನಪಿಸಿಕೊಳ್ಳಬೇಕಾಗಿದೆ. ಅವರುಗಳು ಮಾಡಿರುವ ಕಾರ್ಯ ಶ್ಲಾಘನೀಯ ಕಾರ್ಯವಾಗಿದೆ. ಈ ರಾಷ್ಟ್ರ ಲಕ್ಷಾಂತರ ಜನರ ತ್ಯಾಗ ಬಲಿದಾನದಿಂದ ಸ್ವಾತಂತ್ರ್ಯವನ್ನು ಪಡೆದುಕೊಂಡಿರುವ ರಾಷ್ಟ್ರವಾಗಿದೆ. 2020ನೇ ಇಸವಿಯಷ್ಟರಲ್ಲಿ ಪ್ರಚಂಡ ರಾಷ್ಟ್ರವಾಗಿ ಹೊರಹೊಮ್ಮುವ ಈ ರಾಷ್ಟ್ರದ ಭವಿಷ್ಯತ್ತಿಗೆ ಏನಾದರು ತೊಂದರೆ ಮಾಡಬೇಕೆಂದು ಯಾರಾದರು ಸಂಚು ಮಾಡುತ್ತಿದ್ದರೆ ಅವರ ಸಂಚನ್ನು ವಿಫಲಗೊಳಿಸುವುದಕ್ಕೆ ಸಮರ್ಥರಾಗಿ ಹುತಾತ್ಮರಾದ ಎಲ್ಲ ಯೋಧರಿಗೂ ಆ ಭಗವಂತ ಶಾಂತಿ ಮತ್ತು ಸದ್ಗತಿಯನ್ನು ನೀಡಲಿ ಮತ್ತು ಅವರ ಅಗಲಿಕೆಯನ್ನು ಸಹಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗದವರಿಗೆ ಮತ್ತು ಅವರ ಸನ್ಮಿತ್ರರಿಗೆ ನೀಡಲಿ ಎನ್ನುವ ಪ್ರಾರ್ಥನೆಯನ್ನು ಮಾಡುತ್ತಾ, ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತಿದ್ದೇನೆ.

**ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):–** ಸನ್ಮಾನ್ಯ ಸಭಾಪತಿಯವರೇ, ಇತ್ತೀಚೆಗೆ ಮರಣ ಹೊಂದಿರುವ ಸಾಹಿತಿಗಳು, ರಾಜಕಾರಣಿಗಳು ಮತ್ತು ಪಠಾಣ್‌ಕೋಟ್ ವಾಯು ನೆಲೆಯ ಮೇಲೆ ನಡೆದ ಉಗ್ರರ ದಾಳಿಯಲ್ಲಿ ಹಾಗೂ ಸಿಯಾಚಿನ್ ಹಿಮಪಾತದಲ್ಲಿ ಮರಣ ಹೊಂದಿರುವ ಯೋಧರ ಕುರಿತು ತಾವು ಮಂಡಿಸಿರುವ ಸಂತಾಪ ಸೂಚನಾ ನಿರ್ಣಯಕ್ಕೆ ನನ್ನ ಬೆಂಬಲವನ್ನು ವ್ಯಕ್ತಪಡಿಸುತ್ತಾ, ಅವರೆಲ್ಲರಿಗೂ ನನ್ನ ಶ್ರದ್ಧಾಂಜಲಿಯನ್ನು ಅರ್ಪಿಸುವುದಕ್ಕೆ ಬಯಸುತ್ತಿದ್ದೇನೆ.

**ಸಭಾಪತಿಯವರು:–** ಮೃತರ ಆತ್ಮಕ್ಕೆ ಸದ್ಗತಿಯನ್ನು ಕೋರುತ್ತಾ, ಅವರ ಅಗಲಿಕೆಯ ನೋವನ್ನು ಸಹಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ಪರಮಾತ್ಮನು ಕರುಣಿಸಲೆಂದು ಪ್ರಾರ್ಥಿಸುತ್ತೇನೆ.

unedited copy

ಮೃತರ ಗೌರವಾರ್ಥ ಮಾನ್ಯ ಸದಸ್ಯರುಗಳು ಎದ್ದು ನಿಂತು ಒಂದು ನಿಮಿಷ ಮೌನವನ್ನು ಆಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

**(ಈ ಹಂತದಲ್ಲಿ ಸದನದ ಎಲ್ಲ ಸದಸ್ಯರು ಎದ್ದು ನಿಂತು ಒಂದು ನಿಮಿಷಗಳ ಕಾಲ ಮೌನವನ್ನಾಚರಿಸಿದರು.)**

ಸದನದಲ್ಲಿ ಪ್ರಸ್ತಾಪಿಸಿದ ಸಂತಾಪ ಸೂಚನೆಯನ್ನು ಮೃತರ ಕುಟುಂಬ ವರ್ಗದವರಿಗೆ ಕಳುಹಿಸಲಾಗುವುದು.

unedited copy

# ಪ್ರಕಟಣೆಗಳು

ಸಭಾಪತಿಯವರುಃ– ಈ ಮುಂದಿನ ಪ್ರಕಟಣೆಗಳನ್ನು ಸಭೆಯ ಗಮನಕ್ಕೆ ತರಲು ಬಯಸುತ್ತಿದ್ದೇನೆ;

(ಎ) ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮ 9ರ ಮೇರೆಗೆ ಮಾನ್ಯ ಸಭಾಪತಿಯವರ ಮತ್ತು ಉಪ ಸಭಾಪತಿಯವರ ಗೈರುಹಾಜರಿಯಲ್ಲಿ ಸಭಾಪತಿಯವರ ಸ್ಥಾನದಲ್ಲಿ ಪದಧಾರಣಾ ಮಾಡಲು ಈ ಮುಂದಿನ ಸದಸ್ಯರನ್ನು ನಾಮನಿರ್ದೇಶನ ಮಾಡಲಾಗಿದೆ;

1. ಶ್ರೀ ಬಸವರಾಜ ಹೊರಟ್ಟಿ
2. ಶ್ರೀ ರಾಮಚಂದ್ರಗೌಡ
3. ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ
4. ಶ್ರೀ ಡಿ.ಎಸ್.ವೀರಯ್ಯ

(ಬಿ)ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮ 222ರ ಮೇರೆಗೆ ಕಳೆದ ಅಧಿವೇಶನದಲ್ಲಿ ರಚಿಸಲಾಗಿದ್ದ ಕಾರ್ಯಕಲಾಪಗಳ ಸಲಹಾ ಸಮಿತಿಯ ಸದಸ್ಯರುಗಳನ್ನೇ ಪ್ರಸಕ್ತ ಅಧಿವೇಶನಕ್ಕೂ ಮುಂದುವರೆಸಲಾಗಿದೆ.

(ಸಿ) ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಸಯದ್ ಮುಧೀರ್ ಆಗಾರವರು ದಿನಾಂಕಃ19.02.2016ರಂದು ಬರೆದಿರುವ ಪತ್ರವನ್ನು ಸ್ವೀಕರಿಸಲಾಗಿದೆ. ದಿನಾಂಕಃ21.02.2016ರಂದು ಮೆಕ್ಕಾ ಮದಿನಾ ಯಾತ್ರಾ ಸ್ಥಳಕ್ಕೆ ಪ್ರವಾಸ ಮಾಡುತ್ತಿರುವುದರಿಂದ ದಿನಾಂಕಃ29.02.2016 ರಿಂದ 05.03.2016ರವರೆಗೆ ವಿಧಾನ ಪರಿಷತ್ತಿನ ಪ್ರಸ್ತುತ ಅಧಿವೇಶನಕ್ಕೆ ಗೈರುಹಾಜರಾಗಲು ಅನುಮತಿಯನ್ನು ಕೋರಿರುತ್ತಾರೆ. ಸದರಿಯವರ ಗೈರುಹಾಜರಿಗೆ ಸದನದ ಸಹಮತಿಯಿದೆಯೆಂದು ನಾನು ಭಾವಿಸುತ್ತೇನೆ.

unedited copy

**ಸಭಾಪತಿಯವರು:–** ಈಗ ಪ್ರಶ್ನೋತ್ತರ ಅವಧಿ.

**ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):–** ಸನ್ಮಾನ್ಯ ಸಭಾಪತಿಯವರೇ, ನಾನೊಂದು ನಿಲುವಳಿ ಸೂಚನೆಯನ್ನು ತಮಗೆ ಕಳುಹಿಸಿಕೊಟ್ಟಿದ್ದೇನೆ. ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳಿಗೆ ಉಡುಗೊರೆಯಾಗಿ ಬಂದಿದೆ ಎನ್ನಲಾದ ಸುಮಾರು 70 ಲಕ್ಷ ರೂಪಾಯಿಗಳ ವಜ್ರ ಖಚಿತ ಕೈಗಡಿಯಾರ. . . .  .

**ಶ್ರೀ ಎಸ್.ಆರ್.ಪಾಟೀಲ್(ಸಭಾ ನಾಯಕರು):–** ಸನ್ಮಾನ್ಯ ಸಭಾಪತಿಯವರೇ, ವಾಚ್ ಉಡುಗೊರೆ ಬಂದಿದೆ, ಪೆನ್ನು ಉಡುಗೊರೆ ಬಂದಿದೆ, ಷೂ ಉಡುಗೊರೆ ಬಂದಿದೆ ಎನ್ನುವುದರ ಬಗ್ಗೆ ಚರ್ಚೆ ಮಾಡುವುದಕ್ಕೆ ಇದು ಸಮಯವೇ? ರಾಜ್ಯದಲ್ಲಿ ಉಂಟಾಗಿರುವ ಬರಗಾಲದಂತಹ ಜ್ವಲಂತ ಸಮಸ್ಯೆಯ ಬಗ್ಗೆ ಚರ್ಚೆ ಮಾಡಬೇಕಾಗಿದೆ.

**(ಗೊಂದಲ)**

**ಶ್ರೀ ಅಶ್ವತ್ ನಾರಾಯಣ:–** ಸನ್ಮಾನ್ಯ ಸಭಾಪತಿಯವರೇ, ಅವೆಲ್ಲವುಗಳ ಬಗ್ಗೆ ಚರ್ಚೆ ಆಗಲಿ. ಯಾಕೆ ಚರ್ಚೆಯಾಗಬಾರದು. ಯಾರು ಅದನ್ನು ಕೊಟ್ಟಿದ್ದಾರೆ ಎನ್ನುವುದು ರಾಜ್ಯದ ಜನತೆಗೆ ಗೊತ್ತಾಗಲಿ.

**(ಗೊಂದಲ)**

**ಶ್ರೀ ವೀರಣ್ಣ ಮತ್ತಿಕಟ್ಟಿ:–** ಸನ್ಮಾನ್ಯ ಸಭಾಪತಿಯವರೇ, ರಾಜ್ಯವು ಕಳೆದ 40 ವರ್ಷಗಳಲ್ಲಿ ಕಂಡರಿಯದಂತಹ ಬರಗಾಲ ಪರಿಸ್ಥಿತಿಯನ್ನು ಎದುರಿಸುತ್ತಿದೆ. ಜನ ಮತ್ತು ಜಾನುವಾರುಗಳಿಗೆ ಕುಡಿಯುವುದಕ್ಕೆ ನೀರಿಲ್ಲದಂತಾಗಿದೆ.

unedited copy

**ಶ್ರೀ ಎಸ್.ಆರ್.ಪಾಟೀಲ್:–** ಸನ್ಮಾನ್ಯ ಸಭಾಪತಿಯವರೇ, ವಾಚ್ ವಿಚಾರ ಸಾರ್ವಜನಿಕ ಮಹತ್ವದ ವಿಚಾರವಾಗಿದೆಯೇ? ಬರಗಾಲದ ಬಗ್ಗೆ ಚರ್ಚೆ ಮಾಡುವುದನ್ನು ಬಿಟ್ಟು ಸುಮ್ಮನೆ ಈ ರೀತಿಯ ವಿಚಾರಗಳ ಬಗ್ಗೆ ಪ್ರಸ್ತಾಪ ಮಾಡಿ ಸದನದ ಸಮಯವನ್ನು ಹಾಳು ಮಾಡುತ್ತಾರೆ.

**(ಗೊಂದಲ)**

**ಶ್ರೀ ಅಶ್ವತ್ ನಾರಾಯಣ:–** ಸನ್ಮಾನ್ಯ ಸಭಾಪತಿಯವರೇ, ಅದು ಕದ್ದಿರುವ ವಾಚಾ ಅಥವಾ ಕಳ್ಳಸಾಗಾಣಿಕೆ ಮಾಡಿದ ವಾಚಾ ಎನ್ನುವುದರ ಬಗ್ಗೆ ಚರ್ಚೆಯಾಗಬೇಕಾಗಿದೆ. ಸ್ಪಷ್ಟ ವಿಚಾರ ರಾಜ್ಯದ ಜನತೆಗೆ ಗೊತ್ತಾಗಬೇಕಾಗಿದೆ.

**(ಗೊಂದಲ)**

**ಸಭಾಪತಿಯವರು:–** ದಯಮಾಡಿ ಎಲ್ಲರೂ ಕುಳಿತುಕೊಳ್ಳಿ ಮಾನ್ಯ ವಿರೋಧ ಪಕ್ಷದ ನಾಯಕರು ಏನು ಹೇಳುತ್ತಾರೆ ಎನ್ನುವುದನ್ನು ಕೇಳೋಣ.

**(ಗೊಂದಲ)**

**ಶ್ರೀ ಆರ್.ವಿ.ವೆಂಕಟೇಶ್(ಆಡಳಿತ ಪಕ್ಷದ ಮುಖ್ಯ ಸಚೇತಕರು):–** ಸನ್ಮಾನ್ಯ ಸಭಾಪತಿಯವರೇ, ಇಂದು ನಮ್ಮ ರಾಜ್ಯ ಬಹಳಷ್ಟು ಜ್ವಲಂತ ಸಮಸ್ಯೆಯಗಳನ್ನು ಎದುರಿಸುತ್ತಿದೆ.

unedited copy

ಇಂತಹ ಸಂದರ್ಭದಲ್ಲಿ ತಾವು ಈ ರೀತಿಯ ವಿಚಾರಗಳ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬಾರದು ಎನ್ನುವುದು ನಮ್ಮ ಮನವಿಯಾಗಿದೆ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್‌ಃ–** ಸನ್ಮಾನ್ಯ ಸಭಾಪತಿಯವರೇ, ಇದು ಸದನದಲ್ಲಿ ಪ್ರಸ್ತಾಪ ಮಾಡುವುದಕ್ಕೆ ಯೋಗ್ಯವಾಗಿರುವ ವಿಚಾರವಲ್ಲ ಮತ್ತು ಸಾರ್ವಜನಿಕ ಮಹತ್ವ ಹೊಂದಿರುವ ವಿಚಾರವೂ ಅಲ್ಲ.

(ಮುಂದುವರಿದಿದೆ)

unedited copy

(ಸಭಾಪತಿಯವರ ಉಪಸ್ಥಿತಿ)

**ಶ್ರೀ ಎಸ್.ಆರ್.ಪಾಟೀಲ್ (ಮುಂದು):-**

ಇವತ್ತು ರಾಜ್ಯ ಬರದಿಂದ ತತ್ತರಿಸುತ್ತಿದೆ. ಸುಮಾರು 40 ವರ್ಷಗಳ ನಂತರ ಪ್ರಥಮ ಬಾರಿಗೆ ಭೀಕರವಾದಂಥ ಬರಗಾಲವನ್ನು ಎದುರಿಸುತ್ತಿರುವಂಥ ಸಂದರ್ಭದಲ್ಲಿ ಇವತ್ತಿನ ದಿನ ರೈತರಿಗೆ ಬೆಳೆ ನಷ್ಟ ಉಂಟಾಗಿದೆ, ಜನ ಮತ್ತು ಜಾನುವಾರುಗಳಿಗೆ ಕುಡಿಯುವ ನೀರಿನ ಸಮಸ್ಯೆ ಇದೆ. ಇಂತಹ ಒಂದು ಜ್ವಲಂತವಾದ ಬರಗಾಲವನ್ನು ನಮ್ಮ ರಾಜ್ಯ ಎದುರಿಸುತ್ತಿರುವಂಥ ಸಂದರ್ಭದಲ್ಲಿ ಅಧಿವೇಶನ ಕರೆದಿರುವ ಈ 6 ದಿವಸಗಳಲ್ಲಿ ಈಗಾಗಲೇ ಒಂದು ದಿವಸ ಕಳೆದು ಹೋಗಿದೆ.

**Sri R.V.VENKATESH:-** Your priority should be to an issue of public importance.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೆ, ಸಾರ್ವಜನಿಕ ಹಿತಾಸಕ್ತಿಯ ವಿಚಾರಗಳನ್ನು ಚರ್ಚೆ ಮಾಡಲು ಸರ್ಕಾರ ಸಿದ್ಧವಿದೆ. ದಯಮಾಡಿ ಇವರು ಈಗ ತಂದಿರುವ ಈ ವಿಚಾರವನ್ನು ಚರ್ಚೆ ಮಾಡುವುದು ಸರಿಯಿಲ್ಲ. ವಿರೋಧ ಪಕ್ಷದವರಿಗೆ ಇದು ಭೂಷಣವಲ್ಲ. ಇದು ಒಳ್ಳೆಯದಲ್ಲ. ರಾಜ್ಯದಲ್ಲಿ ಅನೇಕ ಜ್ವಲಂತ ಸಮಸ್ಯೆಗಳಿದ್ದಾವೆ. ನಾವೀಗ ಭೀಕರವಾದಂಥ ಬರಗಾಲವನ್ನು ಎದುರಿಸುತ್ತಿದ್ದೇವೆ. ಸುಮಾರು ಹತ್ತು ಸಾವಿರ ಕೋಟಿ ರೂಪಾಯಿ ಬೆಲೆ ಬಾಳುವ ಬೆಳೆ ನಷ್ಟ ಉಂಟಾಗಿದೆ. ಇವರುಗಳನ್ನೆಲ್ಲಾ ಕರೆದುಕೊಂಡು ನಮ್ಮ ಮುಖ್ಯಮಂತ್ರಿಗಳು ಪ್ರಧಾನ ಮಂತ್ರಿಗಳ ಬಳಿಗೆ ದೆಹಲಿಯವರೆವಿಗೂ ಹೋಗಿದ್ದಾರೆ. ಅದನ್ನು ಬಿಟ್ಟು ವೈಯಕ್ತಿಕ ವಿಚಾರಗಳನ್ನು ಅಂದರೆ ವಾಚ್ ಬಗ್ಗೆ, ಪೆನ್ ಬಗ್ಗೆ, ಶೂ ಬಗ್ಗೆ ಚರ್ಚೆ ಮಾಡುತ್ತೇವೆಂದರೆ ಹೇಗೆ? ನೋಡಿ, ಜನ ಇವರ ಮುಖಕ್ಕೆ ಉಗಿಯುತ್ತಿದ್ದಾರೆ. ಜನಪರ ಕಾಳಜಿ ಇಲ್ಲದೇ ಇರುವಂಥ ಜನ ಇವರು. ಈ ರಾಜ್ಯದ ಜನತೆಯ ಸಮಸ್ಯೆಗಳ ಬಗ್ಗೆ ಇವರಿಗೆ ಕಿಂಚಿತ್ತೂ ಕಾಳಜಿ ಇಲ್ಲ.

**ಸಭಾಪತಿಯವರು:-** ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ನಾನು ಒಂದು ನಿಮಿಷ ಕಾಲ ಮಾತನಾಡುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೆ, ನಿಯಮ 59ರ ಅಡಿಯಲ್ಲಿ preliminary submission ಮಾಡಲಿಕ್ಕೂ ಯೋಗ್ಯವಲ್ಲದೇ ಇರುವಂಥ ಒಂದು ವಿಚಾರ ಇದು.

unedited copy

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ನೀವು ಹತ್ತು ಬಾರಿ ಕುಳಿತುಕೊಳ್ಳಿ ಎಂದರೂ ಸಹ ಇವರ ಭಾಷಣವನ್ನು ನಾವು ಕೇಳಬೇಕೇ?

**ಸಭಾಪತಿಯವರು:–** ನಾನೊಂದು ನಿಮಿಷ ಕಾಲ ಮಾತನಾಡುತ್ತೇನೆ. ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಸದನವನ್ನು ನಡೆಸುವುದಕ್ಕೆ ನಮ್ಮದೇ ಆದಂಥ ನಿಯಮಾವಳಿಗಳಿದ್ದಾವೆ. ನಿಯಮಾವಳಿಗಳ ಮೂಲಕ ಚರ್ಚೆ ಮಾಡುವುದಕ್ಕೆ ಸದನದಲ್ಲಿ ಎಲ್ಲರಿಗೂ ಪೂರ್ಣ ಅವಕಾಶ ಇದೆ. ಆದರೆ ಆ ನಿಯಮಾವಳಿಗಳ ಒಳಗಡೆ ಅದು ಬರುತ್ತದೆಯೋ ಇಲ್ಲವೋ ಎಂದು ಹೇಳುವುದಕ್ಕೆ ನಿಯಮಾವಳಿಗಳ ಮೂಲಕ ಯಾರು ನೋಟಿಸ್‌ನ್ನು ಕೊಟ್ಟಿದ್ದಾರೆ ಅವರಿಗೆ "ನನಗೆ ಈ ಒಂದು ನಿಯಮಾವಳಿಯ ಒಳಗಡೆ ಮಾತನಾಡಲಿಕ್ಕೆ ಅವಕಾಶವಿದೆ. ನನಗೆ ಹೇಳುವುದಕ್ಕೆ ಅವಕಾಶವನ್ನು ಕೊಡಿ." ಎಂದು ಹೇಳುವ ಅಧಿಕಾರವೂ ಸಹ ಎಲ್ಲರಿಗೂ ಇದೆ. ಹಾಗೆಯೇ ಇವತ್ತು ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಇನ್ನಿತರ ಕೆಲವು ಸದಸ್ಯರುಗಳು ಸಹಿ ಮಾಡಿ ನನಗೆ ಒಂದು ನೋಟಿಸ್‌ನ್ನು ಕೊಟ್ಟಿದ್ದಾರೆ. ನಾನು ಬಂದ ತಕ್ಷಣ ನನಗೆ ಆ ನೋಟಿಸ್ ಸಿಕ್ಕಿತು. ಆದ್ದರಿಂದ ನಾನು ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಇಷ್ಟನ್ನು ಮಾತ್ರ ಕೇಳುತ್ತೇನೆ. ಇದು ನಮ್ಮ ನಿಯಮಾವಳಿಗಳ ನಿಯಮ 59ರ ಅಡಿಯಲ್ಲಿ ಬರುತ್ತದೆಯೋ ಇಲ್ಲವೋ, ಏಕೆ ಈ ನಿಯಮದಡಿಯಲ್ಲಿ ಬರುತ್ತದೆ, ಏಕೆ ಚರ್ಚೆ ಮಾಡಬೇಕು ಎಂದು ಹೇಳುವುದಕ್ಕೆ ಅವರಿಗೆ 5 ನಿಮಿಷಗಳ ಕಾಲ ಅವಕಾಶವನ್ನು ಕೊಡುತ್ತೇನೆ. ಅದಾದ ನಂತರ ಮಾನ್ಯ ಸಭಾನಾಯಕರು ಅದು ಬರುತ್ತದೆ ಎಂದರೆ ಒಪ್ಪಿಕೊಳ್ಳಿ, ಬರುವುದಿಲ್ಲವೆಂದರೆ ಬರುವುದಿಲ್ಲವೆಂದು ಹೇಳಿ. ಅದರ ನಂತರ ನಾನು ನನ್ನ ನಿರ್ಣಯವನ್ನು ಹೇಳುತ್ತೇನೆ.

**Sri R.V.VENKATESH:-** This is not a matter of public importance.

**ಶ್ರೀ ಶಿವರಾಜ್ ತಂಗಡಗಿ (ಸಣ್ಣ ನೀರಾವರಿ ಸಚಿವರು):–** ಮಾನ್ಯ ಸಭಾಪತಿಯವರೆ, ರಾಜ್ಯದಲ್ಲಿರುವ ಬರಗಾಲದ ಬಗ್ಗೆ ವಿರೋಧ ಪಕ್ಷದವರು ಚರ್ಚೆ ಮಾಡಲಿ. ಅದಕ್ಕೆ ಸರ್ಕಾರ ಉತ್ತರವನ್ನು ಕೊಡುತ್ತದೆ.

**ಸಭಾಪತಿಯವರು:–** ಈಗ ಮಾನ್ಯ ಸಭಾನಾಯಕರ ಪರವಾಗಿ ನೀವು ಮಾತನಾಡುವುದಾದರೆ ನಾನು ನಿಮಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಡುತ್ತೇನೆ. ಸರ್ಕಾರದ ಪರವಾಗಿ ನಾನು ಮಾನ್ಯ ಸಭಾನಾಯಕರಿಗೆ ಮಾತನಾಡಲು ಮೊದಲ ಅವಕಾಶವನ್ನು ಕೊಡುತ್ತೇನೆ. ಅವರ ಬದಲು ಬೇರೆ ಯಾರಾದರೂ ಸಚಿವರು ಮಾತನಾಡುತ್ತೀರಿ ಎಂದರೆ ನಾನು ಅವರಿಗೂ ಸಹ ಮಾತನಾಡುವುದಕ್ಕೆ

unedited copy

ಅವಕಾಶವನ್ನು ಕೊಡುತ್ತೇನೆ. ಆದರೆ ಮೊದಲು ಅವರು ನಾನೇಕೆ ಇದನ್ನು ಮಂಡಿಸಿದ್ದೇನೆ, ಇದು ಯಾವ ನಿಯಮದಡಿಯಲ್ಲಿ ಬರುತ್ತದೆ, ಇದು ಚರ್ಚೆಗೆ ಯೋಗ್ಯವಾದ ವಿಷಯವೋ, ಅಲ್ಲವೋ ಎನ್ನುವುದನ್ನು ಪ್ರಸ್ತಾಪ ಮಾಡಲಿ. ಅವರಿಗೆ ನಾನು ಮಾತನಾಡಲು ಹೆಚ್ಚಿನ ಸಮಯವನ್ನು ಕೊಡುವುದಿಲ್ಲ. ಗಡಿಯಾರವನ್ನು ನೋಡಿಕೊಂಡು ನಾನು ಮಾರ್ಕ್ ಮಾಡಿಕೊಳ್ಳುತ್ತೇನೆ. ಹಿಂದೆಲ್ಲಾ 5 ನಿಮಿಷಗಳ ಕಾಲ ನಾವು ಚರ್ಚೆ ಮಾಡಿ ಮಾತನಾಡಿದ್ದೇವೆ. ಆ ರೀತಿ ವಿರೋಧ ಪಕ್ಷದ ನಾಯಕರ ಪರವಾಗಿ ಬೇರೆಯವರು ಮಾತನಾಡುತ್ತಾರೆಂದರೆ ಅದಕ್ಕೂ ಸಹ ನಾನು ಅವಕಾಶವನ್ನು ಕೊಡುತ್ತೇನೆ. ಆದರೆ ಯಾರಾದರೂ ಒಬ್ಬರಿಗೆ ನಾನು ಮಾತನಾಡುವುದಕ್ಕೆ ಅವಕಾಶವನ್ನು ಕೊಡುತ್ತೇನೆ ಹೊರತು ಇಬ್ಬರಿಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಡುವುದಿಲ್ಲ. ವಿರೋಧ ಪಕ್ಷದ ನಾಯಕರು ಅಥವಾ ಇನ್ಯಾರಾದರೂ ಒಬ್ಬರು ಮಾತನಾಡಬಹುದು.

**Sri RAMACHANDRAGOWDA:-** Sir, I have a point of order.

**ಸಭಾಪತಿಯವರು:–** ಈಗ point of order ಬರುವುದಿಲ್ಲ.

**ಶ್ರೀ ರಾಮಚಂದ್ರಗೌಡ:–** ಮಾನ್ಯ ಸಭಾಪತಿಯವರೆ, ತಾವು ಈಗಾಗಲೇ ಉತ್ತರವನ್ನು ಕೊಟ್ಟಿದ್ದೀರಿ. ಪ್ರತಿಪಕ್ಷದ ನಾಯಕರಿಗೆ ಮೊದಲನೆಯದಾಗಿ ಮಾತನಾಡತಕ್ಕಂಥ ಹಕ್ಕಿದೆ. ಅದನ್ನು ವಿರೋಧ ಮಾಡಿದರೆ breach of privilege ಆಗುತ್ತದೆ.

**ಸಭಾಪತಿಯವರು:–** ಹಾಗೆ ಆಗುವುದಿಲ್ಲ, ನಾನು ಅವಕಾಶವನ್ನು ಕೊಟ್ಟಿದ್ದೇನೆ.

**Sri RAMACHANDRAGOWDA:-** Please, allow him to speak. That's all.

**ಸಭಾಪತಿಯವರು:–** ವಿಷಯವನ್ನು ಬೇರೆ ಕಡೆಗೆ ತೆಗೆದುಕೊಂಡು ಹೋಗಬೇಡಿ. ಇಲ್ಲಿ point of order ಇಲ್ಲವೇ ಇಲ್ಲ.

**Sri H.C.MAHADEVAPPA:-** Your adjournment motion itself is not maintainable.

unedited copy

**ಡಾ॥ ಮತ್ತಿಕಟ್ಟಿ ವೀರಣ್ಣ:-**ಮಾನ್ಯ ಸಭಾಪತಿಯವರೆ, ನಾನು ಮಾನ್ಯ ವಿರೋಧ ಪಕ್ಷದ ನಾಯಕರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ನಾವು ಈ ರಾಜ್ಯದ ಜ್ವಲಂತ ಸಮಸ್ಯೆಗಳ ಬಗ್ಗೆ ಚಿಂತನೆಯನ್ನು ಮಾಡೋಣ. ಸುಮಾರು 135 ತಾಲ್ಲೂಕುಗಳು ಬರಗಾಲದಿಂದ ತತ್ತಿರಿಸಿವೆ, ಜನರಿಗೆ ಕುಡಿಯುವುದಕ್ಕೆ ನೀರಿಲ್ಲ.

**ಶ್ರೀ ಅಶ್ವಥ್‌ನಾರಾಯಣ:-** ಮಾನ್ಯ ಸಭಾಪತಿಯವರೆ,...

**ಸಭಾಪತಿಯವರು:-** ವಿರೋಧ ಪಕ್ಷದ ನಾಯಕರಿಗೆ ಮಾತನಾಡುವುದಕ್ಕೆ ಬಿಡಿ. ನೀವು ನಿಮ್ಮ ನಾಯಕರಿಗೆ ಮಾತನಾಡುವುದಕ್ಕೆ ಬಿಡುವುದಿಲ್ಲವೇ?

**ಶ್ರೀ ಕೆ.ಎಸ್.ಈಶ್ವರಪ್ಪ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೆ, ಈಗ ಏನು ಪರಿಸ್ಥಿತಿ ಬಂದಿದೆ ಎಂದರೆ ಈ ಸದನ ಮುಗಿಯುತ್ತಿದ್ದ ಹಾಗೆ ನಾವು ಮಂತ್ರಿ ಮಂಡಲವನ್ನು ವಿಸ್ತರಣೆ ಮಾಡುತ್ತೇವೆಂದು ಮಾನ್ಯ ಮುಖ್ಯಮಂತ್ರಿಗಳು ಒಂದು ಹೇಳಿಕೆಯನ್ನು ಕೊಟ್ಟರು. ಕೆಲವರಿಗೆ ಮಂತ್ರಿಮಂಡಲದಲ್ಲಿ ಉಳಿದುಕೊಳ್ಳಬೇಕೆಂಬ ಆಸೆ ಇದೆ, ಇನ್ನು ಕೆಲವರಿಗೆ ಹೊಸದಾಗಿ ಮಂತ್ರಿ ಮಂಡಲಕ್ಕೆ ಸೇರ್ಪಡೆಯಾಗಬೇಕೆಂಬ ಆಸೆ ಇದೆ. ಇವರುಗಳು ಮಾನವೀಯತೆಯನ್ನು ತೋರಿಸುತ್ತಿದ್ದಾರೆ. ಮಾನವೀಯತೆಯನ್ನು ತೋರಿಸಿ ಇದನ್ನು ಮುಖ್ಯಮಂತ್ರಿಗಳ ಗಮನಕ್ಕೆ ತರುವುದಕ್ಕೆ ಪಾಪ ಈಗ ಪರಿಸ್ಥಿತಿ ಈ ರೀತಿ ಬಂದುಬಿಟ್ಟಿದೆ.

(ಗೊಂದಲ)

**ಶ್ರೀಮತಿ ಮೋಟಮ್ಮ:-** ವಾಚ್ ವಿಚಾರವಾಗಿ ಇವರುಗಳೆಲ್ಲಾ ಪ್ರಸ್ತಾಪ ಮಾಡುತ್ತಿದ್ದಾರೆ. ಇದರಲ್ಲಿ ಸಾರ್ವಜನಿಕ ಹಿತಾಸಕ್ತಿಯ ವಿಚಾರ ಏನಿದೆ?

**ಸಭಾಪತಿಯವರು:-** ಅವರು ಹೇಳಲಿ ಬಿಡಿ. ಚರ್ಚೆಯಲ್ಲಿ ಹೇಳುವಾಗ ಒಂದು ವ್ಯಂಗ್ಯವಿದೆ, ಹಾಸ್ಯವಿದೆ. ಇರಲಿ ಬಿಡಿ, ಈಗ ವಿಷಯಕ್ಕೆ ಬನ್ನಿ.

**ಶ್ರೀಮತಿ ಮೋಟಮ್ಮ:-** ಸುಮ್ಮನೆ ವಾಚ್, ಉಂಗುರ, ಪಂಚೆ, ಶರ್ಟ್ ಬಗ್ಗೆ ಮಾತನಾಡುವುದಾದರೆ, ಸಭೆಯನ್ನು ಏಕೆ ಕರೆಯಬೇಕು. ಇದರಲ್ಲಿ ಸಾರ್ವಜನಿಕ ಹಿತಾಸಕ್ತಿ ಏನಿದೆ?

**ಸಭಾಪತಿಯವರು:-** ನಾನು ಅವಕಾಶ ಕೊಟ್ಟಿದ್ದೇನೆ. ಅವರು ಮಾತನಾಡಲಿ.

unedited copy

(07) 01-03-2016 12.00 MD-RN

**ಶ್ರೀ ಕೆ.ಎಸ್.ಈಶ್ವರಪ್ಪ:–** ಅವರು ಯಾವ ವಿಷಯವನ್ನು ತೆಗೆದುಕೊಂಡು ಪ್ರಸ್ತಾಪ ಮಾಡಬೇಕೆಂದು ಬರೆದು ಕೊಡಲಿ. ನಾನು ಆ ವಿಚಾರವಾಗಿ ಮಾತ್ರ ಪ್ರಸ್ತಾಪ ಮಾಡುತ್ತೇನೆ.

**ಡಾ|| ಮತ್ತಿಕಟ್ಟಿ ವೀರಣ್ಣ:–** ಬರಗಾಲದಿಂದ ಜನ ತತ್ತರಿಸುತ್ತಿದ್ದಾರೆ.

**ಶ್ರೀ ಕೆ.ಎಸ್.ಈಶ್ವರಪ್ಪ:–** ನಂತರ ಇನ್ಯಾವ ವಿಚಾರಗಳ ಬಗ್ಗೆ ನಾನು ಮಾತನಾಡಲಿ ಎಂದು ಅವರು ಹೇಳಲಿ. ಈ dictatorship ನಡೆಯುವುದಿಲ್ಲ. ಇವರು ಹೇಳಿದ ಹಾಗೆ ನಾವು ಮಾಡುವುದಕ್ಕಾಗುವುದಿಲ್ಲ. ಯಾವ ವಿಚಾರವನ್ನು ಮಾತನಾಡಬೇಕೆಂದು ನಮಗೆ ಗೊತ್ತಿದೆ. ಯಾವಾಗ ಯಾವ ವಿಚಾರವನ್ನು ಮಂಡನೆ ಮಾಡಬೇಕು, ಯಾವಾಗ ಬಿಡಬೇಕೆಂದು ನಮಗೆ ಗೊತ್ತಿದೆ.

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುತ್ತಾರೆ. ದಯಮಾಡಿ ಮಧ್ಯದಲ್ಲಿ ಬಾಯಿ ಹಾಕಬೇಡಿ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಮಾನ್ಯ ಮುಖ್ಯಮಂತ್ರಿಗಳು ತುಂಬಾ ಸ್ಪಷ್ಟವಾಗಿ ಹೇಳಿದ್ದಾರೆ. ಒಂದು ವಿದೇಶಿ ವಾಚ್ ಉಡುಗೊರೆಯಾಗಿ ನನಗೆ ಬಂದಿದೆ ಎನ್ನುವುದನ್ನು ಅವರು ಒಪ್ಪಿಕೊಂಡಿದ್ದಾರೆ. ಇವರಿಗೆ ಈ ವಾಚ್‌ನ್ನು ಕೊಟ್ಟವರು ಯಾರು? ಇವರಿಗೆ ವಿದೇಶಿ diamond watch ಅನ್ನು ಏಕೆ ಕೊಟ್ಟರು?

ಈ ಬಗ್ಗೆ ಹೇಳಿಕೆಯನ್ನು ಮಾಡಬೇಕಾದರೆ, ಉತ್ತರವನ್ನು ಕೊಡಬೇಕಾದರೆ ಅವರು ಸಭಾನಾಯಕರಾಗಿ ಇಷ್ಟು ವರ್ಷಗಳ ಕಾಲ ಇದ್ದು, ವಿರೋಧ ಪಕ್ಷದಲ್ಲಿಯೂ ಸಹ ಅಷ್ಟು ವರ್ಷಗಳ ಕಾಲವಿದ್ದು ಮಧ್ಯದಲ್ಲಿ ಬಾಯಿ ಹಾಕುತ್ತಾರೆಂದರೆ ಇದು ಯಾವ ನ್ಯಾಯ ಎನ್ನುವುದು ನನಗಂತೂ ಅರ್ಥವಾಗುವುದಿಲ್ಲ. ಹೊಸದಾಗಿ ಬಂದಿರುವ ಶಾಸಕರು ಈ ರೀತಿ ಮಾತನಾಡಿದರೆ ಒಪ್ಪಬಹುದು. ಆದರೆ ಮಾನ್ಯ ಸಭಾನಾಯಕರಿಗೆ ಏನಾಗಿದೆ? ಇದು ಈ ವರ್ಷದ ಮೊಲದನೆಯ ಅಧಿವೇಶನ. ಮಾನ್ಯ ಸಭಾನಾಯಕರ ನಡವಳಿಕೆ ಬಗ್ಗೆ ನಾನು ನಿಜಕ್ಕೂ ಸಹ ಬೇಸರದಿಂದ ಹೇಳುತ್ತೇನೆ. ಅವರು ಇದೇ ರೀತಿ ಮುಂದುವರೆಸಿದರೆ ನಾನು ಬೇರೆ ಪದವನ್ನು ನಂತರ ಬಳಸುತ್ತೇನೆ. ಇದು ಒಳ್ಳೆಯದಲ್ಲ. ನಾನು ನನ್ನ ಹಕ್ಕನ್ನು ಪ್ರತಿಪಾದನೆ ಮಾಡುತ್ತಿದ್ದೇನೆ. ನಾನಿಲ್ಲಿ ಯಾರದ್ದೋ ಭಿಕ್ಷೆಯನ್ನು ಕೇಳುತ್ತಿಲ್ಲ.

unedited copy

**Sri V.S.UGRAPPA:-** I am raising a point of order.

**ಸಭಾಪತಿಯವರು:–** ಅವರು ಮಧ್ಯದಲ್ಲಿಯೇ ಎದ್ದು ಮಾತನಾಡುತ್ತಿದ್ದಾರೆ.

**Sri V.S.UGRAPPA:-** It is my right to raise a point of order. ವಿರೋಧ ಪಕ್ಷದವರಿಗೆ point of order ಪ್ರಸ್ತಾಪ ಮಾಡುವುದಕ್ಕೆ ಅವಕಾಶವನ್ನು ಕೊಡುತ್ತಾರೆ.

**ಶ್ರೀ ಬಸವರಾಜ ಹೊರಟ್ಟಿ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಈ ಕಡೆ ವಿರೋಧ ಪಕ್ಷದವರಿಗೆ point of order ಬರುವುದಿಲ್ಲವೆಂದು ತಾವು ಹೇಳಿದಿರಿ. ಈಗ ಆಡಳಿತ ಪಕ್ಷದ ಸದಸ್ಯರಿಗೆ point of order ಚರ್ಚೆ ಮಾಡುವುದಕ್ಕೆ ಹೇಗೆ ಅವಕಾಶವನ್ನು ಕೊಡುತ್ತೀರಿ?

**ಸಭಾಪತಿಯವರು:–** ಈಗ ವಿಷಯ ಮಂಡನೆಯಾಗದ ಹೊರತು ಅದು ಯಾವುದೇ ರೂಲ್‌ಗೆ ಬರುವುದಿಲ್ಲ. Point of order ಗೆ ಬರುವುದಿಲ್ಲ. ಅದು adjournment motion ಗೆ ಬರುತ್ತದೆಯೋ ಇಲ್ಲವೋ ಎನ್ನುವುದು ಇನ್ನು ತೀರ್ಮಾನವಾಗಿಲ್ಲ.

**ಶ್ರೀ ಬಿ.ಜೆ.ಪುಟ್ಟಸ್ವಾಮಿ:–** ಮಾನ್ಯ ಸಭಾಪತಿಯವರೆ, ಇನ್ನು ವಿಷಯವನ್ನೇ ಪ್ರಾರಂಭ ಮಾಡಿಲ್ಲ. Point of order ಹೇಗೆ ಬರುತ್ತದೆ ಎನ್ನುವುದು ನಮಗೆ ಅರ್ಥವಾಗುತ್ತಿಲ್ಲ.

**Sri V.S.UGRAPPA:-** Ultimately, any motion moved as per the provisions of Rule.29, it should be a recent occurrence and a public importance. What is the decision given by the Speaker Mavalankar? Kindly go through Kaul and Shakdhar's Practice and Procedure of rules in Parliament.

**ಸಭಾಪತಿಯವರು:–** ಮಾನ್ಯ ಉಗ್ರಪ್ಪನವರೆ, ನಿಮ್ಮ point of order ಗೆ ನಾನು ಅವಕಾಶವನ್ನು ಕೊಡುತ್ತೇನೆ. ಸ್ವಲ್ಪ ನಾನು ಹೇಳುವುದನ್ನು ಕೇಳಿ. ವಿಷಯವೇ ಪ್ರಸ್ತಾಪವಾಗದೇ point of order raise ಮಾಡುವುದಕ್ಕೆ ಬರುವುದಿಲ್ಲ.

**(ಈ ಹಂತದಲ್ಲಿ ಶ್ರೀ ಜಗದೀಶ್ ಶೆಟ್ಟರ್, ಶ್ರೀ ಬಿ.ಎಸ್.ಯಡಿಯೂರಪ್ಪ ಹಾಗೂ ಇನ್ನಿತರ ಭಾರತೀಯ ಜನತಾ ಪಕ್ಷದ ಮುಖಂಡರು ದುಬಾರಿ ವಾಚ್ ಧರಿಸಿ ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ ಫೋಟೋಗಳನ್ನು ಸದನದಲ್ಲಿ ಪ್ರದರ್ಶಿಸುತ್ತಾ ಮಾನ್ಯ ಉಗ್ರಪ್ಪನವರು ಹೇಳಿದ ಮಾತು)**

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೆ, ಭಾರತೀಯ ಜನತಾ ಪಾರ್ಟಿಯ ಮುಖಂಡರಿಗೆ ಈ ವಾಚ್‌ಗಳು ಎಲ್ಲಿಂದ ಬಂದಿವೆ?

(ಗೊಂದಲ)

(ಮುಂದು)

unedited copy

(ಪೀಠದಲ್ಲಿ ಸಭಾಪತಿಗಳ ಉಪಸ್ಥಿತಿ)

(ಗೊಂದಲ)

**ಶ್ರೀ ಕೆ.ಎಸ್.ಈಶ್ವರಪ್ಪ:**-ಮಾನ್ಯ ಸಭಾಪತಿಗಳೆ, ಇವರು ನಮ್ಮ ಹಕ್ಕನ್ನೇ ಕಸಿದು ಕೊಳ್ಳುತ್ತಿದ್ದಾರೆ. ಇದನ್ನು ನಾವು ಪ್ರತಿಭಟನೆ ಮಾಡುತ್ತೇವೆ. (ಈ ಹಂತದಲ್ಲಿ ಬಿಜೆಪಿಯ ಸದಸ್ಯರು ಬಾವಿಯೊಳಗೆ ಬಂದರು) . . . . .(ಗೊಂದಲ)

**ಶ್ರೀ ಆರ್.ವಿ.ವೆಂಕಟೇಶ್:**-ಮಾನ್ಯ ಸಭಾಪತಿಗಳೆ, ಇವರು ಇಲ್ಲಿ ರಾಜಕೀಯ ಮಾಡುತ್ತಿದ್ದಾರೆ . . .

(ಗೊಂದಲ)

**ಸಭಾಪತಿಗಳು:**- ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ಸದನ ನಡೆಸುವುದಕ್ಕೆ ಅವಕಾಶ ಮಾಡಿಕೊಡಿ. ಸದನವನ್ನು ಸುಸೂತ್ರವಾಗಿ ನಡೆಸುವುದಕ್ಕೆ ಅನುವು ಮಾಡಿಕೊಡಬೇಕು. ಬಾವಿಯೊಳಗಿರುವ ಎಲ್ಲಾ ಸದಸ್ಯರು ತಮ್ಮ ತಮ್ಮ ಸ್ಥಾನಗಳಿಗೆ ತೆರಳಬೇಕು, ಸದನ ನಡೆಸುವುದಕ್ಕೆ ಅವಕಾಶ ಮಾಡಿಕೊಡಬೇಕು. ಮಾನ್ಯ ಹೊರಟ್ಟಿಯವರು ಮಾತನಾಡಬಯಸುತ್ತಿದ್ದಾರೆ . . .

(ಗೊಂದಲ)

**ಶ್ರೀ ಕೆ.ಎಸ್.ಈಶ್ವರಪ್ಪ:**-ಮಾತನಾಡುವುದಕ್ಕೆ ಬಿಡದೆ ನಮ್ಮ ಹಕ್ಕನ್ನು ಕಸಿದುಕೊಳ್ಳುತ್ತಿದ್ದಾರೆ . . .

(ಗೊಂದಲ)

**ಶ್ರೀ ಆರ್.ವಿ.ವೆಂಕಟೇಶ್:**- ರಾಜ್ಯದ ಸಮಸ್ಯೆಗಳ ಬಗ್ಗೆ ಚರ್ಚೆ ಆಗಬೇಕು, ಈ ರೀತಿಯ ವಿಚಾರಗಳ ಬಗ್ಗೆ ಅಲ್ಲ. ಇವರು ರಾಜಕೀಯ ಪ್ರಚಾರಕ್ಕಾಗಿ ಹೀಗೆ ಮಾಡುತ್ತಿದ್ದಾರೆ. . . .(ಗೊಂದಲ)

**ಶ್ರೀ ಬಸವರಾಜ ಹೊರಟ್ಟಿ:**-ಮಾನ್ಯ ಸಭಾಪತಿಗಳೆ, ಈ ರೀತಿ ಮಾಡಿದರೆ ಸದನ ನಡೆಸುವುದಕ್ಕೆ ಆಗುತ್ತದೆಯೇ? ಮಾನ್ಯ ವಿರೋಧ ಪಕ್ಷದ ನಾಯಕರು ಒಂದು ವಿಷಯವನ್ನು ಮೂವ್ ಮಾಡಿದ್ದಾರೆ. ಅವರು ಏನು ಹೇಳುತ್ತಾರೋ ಹೇಳಲಿ. ಅದಕ್ಕೆ ಸರ್ಕಾರ ಉತ್ತರ ಕೊಡಲಿ. ಈ ರೀತಿ ಏಕೆ ಗಲಾಟೆ

unedited copy

ಮಾಡಬೇಕು? ನನಗಂತೂ ಅರ್ಥವಾಗುತ್ತಿಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರು ಒಂದು ವಿಷಯವನ್ನು ಮಾತನಾಡಬಯಸುತ್ತಿದ್ದಾರೆ. ಅದಕ್ಕೆ ಸಂಬಂಧಪಟ್ಟಂತೆ ಸರ್ಕಾರ ಉತ್ತರ ಕೊಡಲಿ. ಸದನಲ್ಲಿ ಈ ರೀತಿಯಾದರೆ ಜನ ನಮಗೆ ಏನೆನ್ನುತ್ತಾರೆ? ಇದು ಸದನ ನಡೆಸುವ ಪದ್ಧತಿಯೇ?

**ಸಭಾಪತಿಗಳು:–** ಹಿರಿಯರಾದ ಮಾನ್ಯ ಬಸವಹೊರಟ್ಟಿಯವರು ತಮ್ಮ ಅಭಿಪ್ರಾಯ ಹೇಳಿದ್ದಾರೆ. ತಮ್ಮ ತಮ್ಮ ಸ್ಥಾನಗಳಿಗೆ ತೆರಳಿಬೇಕೆಂದು ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಮಾನ್ಯ ವಿರೋಧ ಪಕ್ಷದ ನಾಯಕರಿಗೆ ನಾನು ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೇನೆ. ಅವರು 5 ನಿಮಿಷಗಳ ಕಾಲ ಮಾತನಾಡುತ್ತಾರೆ. ದಯಮಾಡಿ ಅವರಿಗೆ ಮಾತನಾಡುವುದಕ್ಕೆ ಅವಕಾಶ ಕೊಡಿ. (ಗೊಂದಲ)

**ಶ್ರೀ ಕೆ.ಎಸ್.ಈಶ್ವರಪ್ಪ:–**ಮಾನ್ಯ ಸಭಾಪತಿಗಳೆ, ತಾವು ನಮ್ಮ ರಕ್ಷಣೆಗೆ ಬರಬೇಕು. ನಾವು ಕೊಟ್ಟಿರುವಂತಹ ನಿಲುವಳಿ ಸೂಚನೆ ವಿಷಯದ ಮೇಲೆ ಅದು ನಿಲುವಳಿ ಸೂಚನೆಯನ್ನಾಗಿ ತೆಗೆದುಕೊಳ್ಳಬೇಕು ಎನ್ನುವುದನ್ನು ತಮಗೆ ಮನವರಿಕೆ ಮಾಡಲು ಪೂರ್ವಭಾವಿಯಾಗಿ ಚರ್ಚೆ ಮಾಡುವುದಕ್ಕೆ ಅವಕಾಶ ಇದೆಯೋ ಇಲ್ಲವೋ ಎನ್ನುವುದನ್ನು ತಿಳಿಯಲು 5 ನಿಮಿಷಗಳ ಕಾಲಾವಕಾಶ ಕೊಟ್ಟಿದ್ದೀರಿ. ಆದರೆ ಕಾಂಗ್ರೆಸ್‌ನವರು ನಮ್ಮ ಹಕ್ಕನ್ನು ಕಸಿದುಕೊಳ್ಳುವ ಪ್ರಯತ್ನ ಮಾಡುತ್ತಿದ್ದಾರೆ. ತಾವು ನಮ್ಮ ರಕ್ಷಣೆಗೆ ಬರಬೇಕು. (ಗೊಂದಲ)

**ಡಾ:ಮತ್ತಿಕಟ್ಟಿ ವೀರಣ್ಣ:–** ನಿಮ್ಮ ಹಕ್ಕಿಗಿಂತ ರಾಜ್ಯದ ಜನತೆಯ ಹಕ್ಕು ದೊಡ್ಡದು. ಅವರ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡಿ . . . (ಗೊಂದಲ)

**ಶ್ರೀ ಆರ್.ವಿ.ವೆಂಕಟೇಶ್:–** ಮಾನ್ಯ ಸಭಾಪತಿಗಳೆ, ಈ ವಿಚಾರವನ್ನೇ ಹಿನ್ನೆಲೆಯಾಗಿಟ್ಟುಕೊಂಡು ಇಡೀ ಸದನವನ್ನು ಮುಂದೆ ತಳ್ಳಬೇಕು, ರಾಜಕೀಯ ಪ್ರಚಾರ ಪಡೆದುಕೊಳ್ಳಬೇಕು ಎಂದು ಇವರು ತೀರ್ಮಾನ ಮಾಡಿಕೊಂಡಿದ್ದಾರೆ. ಇದು ಸರಿಯಲ್ಲ . . .(ಗೊಂದಲ)

**ಸಭಾಪತಿಗಳು:–** ಈಗ ಸದನವನ್ನು 10 ನಿಮಿಷಗಳ ಕಾಲ ಮುಂದೂಡುತ್ತೇನೆ.

(ಸದನವನ್ನು 12.14 ಗಂಟೆಯಿಂದ 10 ನಿಮಿಷಗಳ ಕಾಲ ಮುಂದೂಡಲಾಯಿತು)

unedited copy

**(ಸದನವು ಪುನಃ ಮಧ್ಯಾಹ್ನ 12 ಗಂಟೆ 59 ನಿಮಷಕ್ಕೆ ಪ್ರಾರಂಭವಾಯಿತು)**

**(ಮಾನ್ಯ ಸಭಾಪತಿಯವರಾದ ಶ್ರೀ ಡಿ.ಹೆಚ್.ಶಂಕರಮೂರ್ತಿಯವರು ಪೀಠವನ್ನಲಂಕರಿಸಿದರು)**

**(ಈ ಹಂತದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಜೆಡಿಎಸ್ ಪಕ್ಷದ ನಾಯಕರಾದ ಶ್ರೀ ಬಸವರಾಜ ಹೊರಟ್ಟಿಯವರನ್ನು ಹೊರತುಪಡಿಸಿ ಬಿಜೆಪಿ ಹಾಗೂ ಜೆಡಿಎಸ್ ಪಕ್ಷದ ಮಾನ್ಯ ಸದಸ್ಯರುಗಳು ಸದನದ ಬಾವಿಗೆ ಬಂದು ಧರಣಿಯನ್ನು ಮುಂದುವರೆಸಿದರು)**

**ಸಭಾಪತಿಯವರು:–** ದಯಮಾಡಿ ಎಲ್ಲಾ ಮಾನ್ಯ ಗೌರವಾನ್ವಿತ ಸದಸ್ಯರು ತಮ್ಮ ತಮ್ಮ ಸ್ಥಾನಗಳಿಗೆ ತೆರಳಿ ಸದನ ನಡೆಸುವುದಕ್ಕೆ ಅನುವು ಮಾಡಿಕೊಡಿ. ನಾನು ಮುಂದೆ ಏನು ಮಾಡಬೇಕೆಂದು ಹೇಳುತ್ತೇನೆ. ದಯಮಾಡಿ ತಮ್ಮ ತಮ್ಮ ಸ್ಥಾನಗಳಿಗೆ ಬಂದು ಸನದ ನಡೆಸುವುದಕ್ಕೆ ಅವಕಾಶ ಮಾಡಿಕೊಡಿ.

(ಮುಂದು)

unedited copy

**ಶ್ರೀ ಬಸವರಾಜ ಹೊರಟ್ಟಿ:-** ಮಾನ್ಯ ಸಭಾಪತಿಗಳೆ, ಸದನದಲ್ಲಿ ಹೊಸ ಸದಸ್ಯರು ಬಂದಿದ್ದಾರೆ. ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುತ್ತಿದ್ದಾರೆ. ಅವರು ಏನು ಮಾತನಾಡುತ್ತಾರೆ ಎನ್ನುವುದನ್ನು ಕೇಳಿ. ಅದಕ್ಕೆ ತಾವು ಏನು ಹೇಳುತ್ತೀರಿ ಅದಕ್ಕೆ ನಾವೆಲ್ಲರೂ ಬದ್ಧರು. ಈ ಸದನದಲ್ಲಿ ಕುಸ್ತಿಯಾಡುವುದು ಬೇಡ ಎನ್ನುವುದು ನನ್ನ ಅಭಿಪ್ರಾಯ. ಹೊರಗಡೆ ಜನ ಏನು ಮಾತನಾಡುತ್ತಾರೆ ಎನ್ನುವುದನ್ನು ನಾವು ಯೋಚನೆ ಮಾಡಬೇಕು. ಅದಕ್ಕಾಗಿ ಸದನವನ್ನು ಸರಿಯಾಗಿ ನಡೆಸಿಕೊಂಡು ಹೋಗಲು ನಮ್ಮ ಪಕ್ಷವು ಸೇರಿ ಎಲ್ಲರೂ ಸಹಕರಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

**ಸಭಾಪತಿಯವರು:-** ದಯಮಾಡಿ ಎಲ್ಲರೂ ತಮ್ಮ-ತಮ್ಮ ಸ್ಥಾನಗಳಿಗೆ ತೆರಳಬೇಕು.

**ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಗಳೆ, ನಾನು ಮೂರು ಬಾರಿ ಎಂಎಲ್ಎ ಮತ್ತು ಈಗ ಎಂಎಲ್ಸಿಯಾಗಿದ್ದೆನೆ. ವಿರೋಧ ಪಕ್ಷದ ನಾಯಕರ ಮಾತಿಗೆ ಅಡ್ಡ ಬರುತ್ತಿರುವುದನ್ನು ನನ್ನ ಜೀವನದಲ್ಲಿ ನಾನು ಮೊದಲ ಬಾರಿಗೆ ನೋಡುತ್ತಿದ್ದೇನೆ. ನಾನು ತಮ್ಮಲ್ಲಿ ಕೈಮುಗಿದು ಪ್ರಾರ್ಥನೆ ಮಾಡುತ್ತೇನೆ, ಇವತ್ತು ಸದನ ಪ್ರಾರಂಭವಾದಾಗಿನಿಂದ ಇಲ್ಲಿಯವರೆಗೆ ನಮ್ಮದೇನಾದರು ತಪ್ಪಿದರೆ ಹೇಳಿ. ತಮಗೆ ಪೂರ್ಣ ಅಧಿಕಾರವಿದೆ ಹೇಳಿ, ಮಾನ್ಯ ಸಭಾನಾಯಕರು ಹೇಳಲಿ. ನಾನು ಹೇಳ ಹೊರಟಿರುವುದು, ಇಂದು ನಾವು ಒಂದು ನಿಲುವಳಿ ಸೂಚನೆಯನ್ನು ಮಂಡನೆ ಮಾಡಿದ್ದೆವೆ. ಇಂತಹ ವಿಷಯವನ್ನೆ ನಿಲುವಳಿ ಸೂಚನೆಯಲ್ಲಿ ಮಂಡನೆ ಮಾಡಬೇಕೆಂದು ಹೇಳುವ ಅಧಿಕಾರ ಯಾರಿಗೂ ಇಲ್ಲ. ಉತ್ತರ ಕೊಡುವ ಸಂದರ್ಭದಲ್ಲಿ ಏನಾದರೂ ಉತ್ತರ ಕೊಡಲಿ ಸರ್ಕಾರಕ್ಕೆ ಅಧಿಕಾರವಿದೆ. ವಿರೋಧ ಪಕ್ಷದವರು ಹೀಗೆ ಮಾತನಾಡಬೇಕೆಂದು ಹೇಳುವ ಅಧಿಕಾರ ಆಡಳಿತ ಪಕ್ಷಕ್ಕೆ ಇಲ್ಲ. ಆಡಳಿತ ಪಕ್ಷ ಹೀಗೆ ಉತ್ತರ ಕೊಡಬೇಕು ಎನ್ನುವ ಅಧಿಕಾರ ವಿರೋಧ ಪಕ್ಷಕ್ಕೆ ಇಲ್ಲ. ಇವತ್ತು ಬಿಜೆಪಿ ಮತ್ತು ಜೆಡಿಎಸ್ ಪಕ್ಷದ ಸದಸ್ಯರು ಇವತ್ತು ಧರಣಿ ಕೊಡಲು ಕಾರಣ ಎಂದರೆ, ವಿರೋಧ ಪಕ್ಷವನ್ನು ಹತ್ತಿಕುವಂತಹ ಕೆಲಸವನ್ನು ಆಡಳಿತ ಪಕ್ಷ ಮಾಡುತ್ತಿದೆ. ಅದಕ್ಕಾಗಿ ನಾವು ಇಂದು ಧರಣಿ ನಡೆಸಬೇಕಾಗಿದೆ. ಈ ರೀತಿಯ ಪರಿಸ್ಥಿತಿ ಇನ್ನು ಮುಂದೆ ಯಾವತ್ತು ಬರಬಾರದು. ತಾವು ನಮ್ಮ ರಕ್ಷಣೆಗೆ ಬರಬೇಕು. ಆಡಳಿತ ನಡೆಸುವಂತಹ ಕಾಂಗ್ರೆಸ್‌ನವರು ಈ ರೀತಿ ನಡೆದುಕೊಳ್ಳುತ್ತಿರುವಂತಹ ಸಂದರ್ಭದಲ್ಲಿ ನೀವು ನಮ್ಮ ರಕ್ಷಣೆಗೆ ಬರದೆ ಇದ್ದರೆ ಇನ್ನಾರು ಬರುತ್ತಾರೆ? ನಾನು ಕೈಮುಗಿದು ಪ್ರಾರ್ಥನೆ ಮಾಡುತ್ತೇನೆ, ನಾನು ತಮ್ಮ ಮಾತಿಗೆ ಬೆಲೆ ಕೊಟ್ಟು ನಮ್ಮ ಶಾಸಕರನ್ನು ಧರಣಿಯಿಂದ ವಾಪಸ್ ಕರೆಯುತ್ತೇನೆ. ಆದರೆ ನಮ್ಮ ವಿಚಾರವನ್ನು ಮಂಡನೆ ಮಾಡಲು

unedited copy

ಈ ಸದನದಲ್ಲಿ ಆಡಳಿತ ಪಕ್ಷದವರು ಯಾವುದೆ ಕಾರಣಕ್ಕೂ ಅಡ್ಡ ಬರಬಾರದು ಎಂದು ಹೇಳುತ್ತೇನೆ. ಆಡಳಿತ ಪಕ್ಷದ ನಾಯಕರು ಎದ್ದು ನಿಂತು ಎರಡು ಸಾರಿ ಹೇಳಿದರೂ ಅವರ ಮಾತನ್ನು ಕೇಳಲಿಲ್ಲ, ನೀವು ಹತ್ತು ಸಾರಿ ಹೇಳಿದರೂ ನಿಮ್ಮ ಮಾತನ್ನು ಕೇಳಲಿಲ್ಲ. ಬೇರೆ ಯಾರ ಮಾತನ್ನು ಕೇಳುತ್ತಾರೆ ಇವರು. ಅದಕ್ಕಾಗಿ ನಮ್ಮ ಹಕ್ಕನ್ನು ಅವರು ಕಸಿದುಕೊಳ್ಳಬಾರದು, ಅವರ ಹಕ್ಕನ್ನು ನಾವು ಕಸಿದುಕೊಳ್ಳಬಾರದು. ನಮ್ಮ ವಿಚಾರವನ್ನು ಮಂಡನೆ ಮಾಡಲು ಯಾವತ್ತು ಅವರು ಅಡ್ಡ ಬರಬಾರದು ಎಂದು ಪ್ರಾರ್ಥನೆ ಮಾಡಿ, ನಮ್ಮ ಎಲ್ಲ ಸದಸ್ಯರು ತಮ್ಮ-ತಮ್ಮ ಸ್ಥಾನಗಳಿಗೆ ಬರಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

**( ಈ ಹಂತದಲ್ಲಿ ಬಿಜೆಪಿ ಮತ್ತು ಜೆಡಿಎಸ್ ಪಕ್ಷದ ಸದಸ್ಯರು ಧರಣಿಯನ್ನು ಮುಕ್ತಾಯಗೊಳಿಸಿ ತಮ್ಮ-ತಮ್ಮ ಸ್ಥಾನಗಳಿಗೆ ತೆರಳಿದರು)**

**ಶ್ರೀ ಕೆ.ಬಿ.ಶಾಣಪ್ಪ:-** ನೀವು ನಮ್ಮನ್ನು ನೋಡಿ ಕಲಿಯಬೇಕು. You have to learn from us as to how to behave on the floor of the House. You have to learn lot of things from us. I am the most senior man in this House. ವಯಸ್ಸಿನಲ್ಲಿ ನಾನು ಸಂಸತ್ತಿನ ಹೋರಾಟ ಮಾಡಿದ್ದೆನೆ. ಈಗ ತಲೆ ಮೆತ್ತಗಾಗಿದೆ, ನಿಮ್ಮ ಮಾತನ್ನು ಕೇಳುತ್ತಾ ಕುಳಿತ್ತಿದ್ದೆವೆ.

**ಸಭಾಪತಿಯವರು:-** ನಾನು ವಿರೋಧ ಪಕ್ಷ, ಆಡಳಿತ ಪಕ್ಷ ಎಂದು ಭೇದಭಾವ ಮಾಡಿಲ್ಲ, ಮಾಡುವುದು ಇಲ್ಲ. ನಾನು ಬೆಳಗ್ಗೆ ಹೇಳಿದ ಹಾಗೆ, ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಕೆಲವು ಗೌರವಾನ್ವಿತ ಸದಸ್ಯರು ಸಹಿ ಮಾಡಿ ಒಂದು ವಿಷಯವನ್ನು ಕೊಟ್ಟಿದ್ದಾರೆ. ಏನು ವಿಷಯ, ಇದನ್ನು ಏಕೆ ತೆಗೆದುಕೊಳ್ಳಬೇಕು, ಇದರ ಗಾಂಭಿರ್ಯತೆ ಏನು ಎನ್ನುವುದನ್ನು ಹೇಳಲು ವಿರೋಧ ಪಕ್ಷದ ನಾಯಕರಿಗೆ ಐದು ನಿಮಿಷಗಳ ಅವಕಾಶವನ್ನು ಕೊಡುತ್ತೇನೆ ಎಂದು ಹೇಳಿದೆ, ಈಗಲೂ ಅವರಿಗೆ ಐದು ನಿಮಿಷಗಳ ಅವಕಾಶವನ್ನು ಕೊಡುತ್ತೇನೆ. ನಂತರ ಅದರ ಬಗ್ಗೆ ಸಭಾನಾಯಕರು ಅಥವಾ ಯಾರಾದರೂ ಮಂತ್ರಿಗಳು ಇದರ ಬಗ್ಗೆ ಉತ್ತರ ಕೊಡಬೇಕು. ಸರ್ಕಾರದ ಪರವಾಗಿ ಇದು ಒಳ್ಳೆಯ ವಿಚಾರ ಚರ್ಚೆ ಮಾಡುತ್ತೇವೆ ಎಂದು ಹೇಳಿ ಉತ್ತರ ಬಂದಾಗ ಅದು ಬೇರೆ, ಚರ್ಚೆ ಮಾಡುವುದಿಲ್ಲ ಎಂದು ಉತ್ತರ ಬಂದರೆ ಅದು ಬೇರೆ. ಉತ್ತರ ಬಂದಮೇಲೆ ನಾನು ಈ ಸ್ಥಾನದಿಂದ ತೀರ್ಮಾನವನ್ನು ಹೇಳಲು ಅವಕಾಶ ಮಾಡಿಕೊಡಬೇಕು. ಒಬ್ಬರು ಮಾತನಾಡುವಾಗ ಇನ್ನೊಬ್ಬರು ಮಾತನಾಡಬೇಡಿ. ಸಮಯದ ಬಗ್ಗೆ ನಾನು

unedited copy

ಸ್ವಲ್ಪ ಕಟ್ಟುನಿಟ್ಟಾಗಿ ಇರುತ್ತೇನೆ. ವಿರೋಧ ಪಕ್ಷದ ನಾಯಕರಿಗೆ ಐದು ನಿಮಿಷ ಎಂದು ಸಮಯ ಕೊಟ್ಟಮೇಲೆ ನಾನು ನೋಟ್ ಮಾಡಿಕೊಳ್ಳುತ್ತೇನೆ. ಐದು ನಿಮಿಷ ಆದತಕ್ಷಣ ನಾನು ಮಧ್ಯೆದಲ್ಲಿ ಬಾಯಿ ಹಾಕಿ ನಿಲ್ಲಿಸುತ್ತೇನೆ. ಹಾಗೆ ಆಡಳಿತ ಪಕ್ಷಕ್ಕೆ ಉತ್ತರ ಕೊಡುವುದು ಸ್ವಲ್ಪ ಉದ್ದವಾಗಬಹುದು ಅದಕ್ಕಾಗಿ ಅವರಿಗೆ 5ರಿಂದ 8ನಿಮಿಷಗಳ ಸಮಯವನ್ನು ಕೊಡುತ್ತೇನೆ. ಸರ್ಕಾರ ಉತ್ತರ ಕೊಡುವಾಗ ಆಡಳಿತ ಪಕ್ಷದವರಾಗಲಿ, ವಿರೋಧ ಪಕ್ಷದವರಾಗಲಿ ದಯಮಾಡಿ ಮಧ್ಯೆದಲ್ಲಿ ಯಾರು ಮಾತನಾಡಬೇಡಿ. ಈಗ ವಿರೋಧ ಪಕ್ಷದ ನಾಯಕರು ಪ್ರಾರಂಭ ಮಾಡಬೇಕು.

**ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಗಳೆ, ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳು ವಿದೇಶಿ ವಾಚನ್ನು ಉಡುಗರೆಯಾಗಿ ಪಡೆದಿದ್ದಾರೆ ಎನ್ನುವುದು ಇವತ್ತು ಇಡೀ ದೇಶದಲ್ಲಿಯೇ ಚರ್ಚೆಯಾಗುತ್ತಿರುವಂತಹ ವಿಷಯ. ಉಡುಗರೆ ಬಂದಿದು ಎಲ್ಲಿಂದ? ಯಾರು ಉಡುಗರೆ ಕೊಟ್ಟರು? ಉಡುಗರೆ ಕೊಡಬೇಕಾದರೆ ಏತಕ್ಕೆ ಕೊಟ್ಟರು? ಇದೇ ಮುಖ್ಯವಾದ ಅಂಶ. ಉಡುಗರೆ ಯಾರು ಕೊಟ್ಟರು, ಏತಕ್ಕೆ ಕೊಟ್ಟರು ಎನ್ನುವುದೆ ಇವತ್ತು ಇಡೀ ರಾಜ್ಯದಲ್ಲಿ ಚರ್ಚೆಯಾಗುತ್ತಿರುವಂತಹ ಅಂಶ. ಉಡುಗರೆ ತೆಗೆದುಕೊಳ್ಳಬೇಕಾದರು ಸಹ ಕೆಲವು ನಿಯಮಗಳು ಇವೆ. Sir, I am quoting Code of Conduct for Ministers (Both Union and State) notified by the Ministry of Home Affairs, Government of India which reads thus:

"In addition to the observance of the provisions of the Constitution, the Representation of the People Act, 1951, and any other law for the time being in force, a person immediately after entering office as a Minister, and in any case within a period of two months from the date of assumption of office, shall:

a) Disclose to the Prime Minister, or the Chief Minister, as the case may be details of the assets and liabilities, and of business interests, of himself and of members of his family. The details to be disclosed shall consist of particulars of all

unedited copy

immovable property and the total approximate value of (i) shares and debentures, (ii) cash holdings and (iii) jewellery. Such a statement of assets and liabilities could be in respect of the financial year for which the income tax return has already been filed by the Minister,

b) Sever all connections, short of divesting himself of the ownership, with the conduct and management of any business in which he was interested before his appointment as Minister,.......”

ತುಂಬಾ ಸ್ಪಷ್ಟವಾಗಿ Code of conduct ಇದೆ. ಉಡುಗರೆ ತೆಗೆದುಕೊಳ್ಳುವಂತಹ ಸಂದರ್ಭದಲ್ಲಿ, ಮೊದಲನೆಯದಾಗಿ, ಅವರ Family assets and liabilities ಬಂದಿರುವ ಸಂದರ್ಭದಲ್ಲಿ ಅವರು ತೆಗೆದುಕೊಳ್ಳುವ ಹಾಗೆ ಇಲ್ಲ. ತೆಗೆದುಕೊಳ್ಳುವಂತಹ ಸಂದರ್ಭ ಬಂದಾಗ Income-tax return file ಮಾಡಿರಬೇಕು. ಲೋಕಾಯುಕ್ತಕ್ಕೆ ಈ ಮಾಹಿತಿಯನ್ನು ಕೊಟ್ಟಿರಬೇಕು. ಈಗ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳು ತೆಗೆದುಕೊಂಡಿರುವಂತಹ ಉಡುಗರೆ ಬಗ್ಗೆ ಲೋಕಾಯುಕ್ತದಲ್ಲಿಯು ಮಾಹಿತಿ ಇಲ್ಲ, ಇನ್‌ಕಮ್ ಟ್ಯಾಕ್ಸ್‌ನಲ್ಲಿಯು ಸೇರಿಸಿರುವುದಿಲ್ಲ. ಹೀಗಾಗಿ ಇವತ್ತು ನಾವು ಪ್ರಸ್ತಾಪ ಮಾಡುತ್ತಿರುವುದು, ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳು ಈ ವಾಜನ್ನು ಉಡುಗರೆಯಾಗಿ ತೆಗೆದುಕೊಂಡಿರುವಂತಹ ಸಂದರ್ಭದಲ್ಲಿ ಪ್ರಭಾವ ಬೀರಿಸಿಕೊಳ್ಳಲು ಯಾರೊ ವ್ಯಕ್ತಿ ಇವರಿಗೆ ಕೊಟ್ಟಿದ್ದಾರೆ, ಯಾವ ಪ್ರಭಾವಕ್ಕೆ? ಏನು ಕೆಲಸ ಮಾಡಿಸಿಕೊಂಡಿದ್ದಾರೆ? ಇದು ಒಂದು ರೀತಿಯಲ್ಲಿ ಅಪರೋಕ್ಷ ಭ್ರಷ್ಟಾಚಾರವಾಗಿದೆ. ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳು ತೆಗೆದುಕೊಂಡಿರುವ ಉಡುಗರೆಯನ್ನು ನಾನು ತೆಗೆದುಕೊಂಡಿರುವುದಿಲ್ಲ ಎಂದು ಹೇಳಿಲ್ಲ. ತೆಗೆದುಕೊಂಡಿದ್ದೇನೆ ಎಂದು ಹೇಳುತ್ತಾರೆ. ಹೀಗೆ ಹೇಳದ ಮೇಲೆ ನೀತಿ ಸಂಹಿತೆಯನ್ನು ಅನುಸರಿಸಿದ್ದಾರೆಯೇ? ಇವತ್ತು ಕರ್ನಾಟಕ ರಾಜ್ಯದ ಮೇಲ್ಮನೆಯಲ್ಲಿ ಪ್ರಸ್ತಾಪ ಮಾಡುವಂತಹ ಸಂದರ್ಭದಲ್ಲಿ ಕಾನೂನು ಬದ್ಧವಾಗಿ ಮಾನ್ಯ ಮುಖ್ಯಮಂತ್ರಿಗಳು ಕಾನೂನಿನ ವಿರುದ್ಧವಾಗಿ ಉಡುಗರೆಯನ್ನು ತೆಗೆದುಕೊಂಡಿದ್ದಾರೆ ಎಂದು ನಾವು ಆಪಾದನೆ ಮಾಡುತ್ತಿದ್ದೇವೆ. ಕಾನೂನು ವಿರುದ್ಧವಾಗಿ ಒಬ್ಬ ಮುಖ್ಯಮಂತ್ರಿ ಉಡುಗರೆಯನ್ನು ತೆಗೆದುಕೊಂಡಾಗ ಅದನ್ನು ಈ ಮನೆಯಲ್ಲಿ ಅಲ್ಲದೆ ಬೇರೆ ಎಲ್ಲಿ ಪ್ರಸ್ತಾಪ ಮಾಡಬೇಕು? ಇವತ್ತು ಇಡೀ ಕರ್ನಾಟಕ ರಾಜ್ಯದ ಮಾನ-ಮರ್ಯಾದೆ ಬಗ್ಗೆ ಇಡೀ ದೇಶದಲ್ಲಿ ಚರ್ಚೆಯಾಗುತ್ತಿದೆ.

unedited copy

**ಶ್ರೀ ಐವಾನ್ ಡಿ'ಸೋಜಾ:-** ಮಾನ-ಮಾರ್ಯದೆ ಎನ್ನುವುದು ಎಲ್ಲ ಬೇಡ.

(ಗೊಂದಲ)

**ಸಭಾಪತಿಯವರು:-** ಅವರಿಗೆ ಇನ್ನು ಎರಡು ನಿಮಿಷ ಸಮಯವಿದೆ. ಅವರು ಮಾತನಾಡಲಿ ಎಲ್ಲರೂ ಕುಳಿತುಕೊಳ್ಳಿ. ಉತ್ತರ ಕೊಡುವಾಗ ಹೇಳಿ.

(ಗೊಂದಲ)

ಇನ್ನು ಎರಡು ನಿಮಿಷವಿದೆ ಮಾತನಾಡಿ ನೀವು.

ಶ್ರೀ ಕೆ.ಎಸ್.ಈಶ್ವರಪ್ಪ:- ಇವರು ಈ ರೀತಿ ಮಧ್ಯೆ ಬಂದರೆ ಇನ್ನು ಎರಡು ನಿಮಿಷ ಅಲ್ಲ, ಮತ್ತೆ ಮೊದಲಿನಿಂದ ಪ್ರಾರಂಭ ಮಾಡುತ್ತೇನೆ ನಾನು. ಬರಿ ಮುಖ್ಯಮಂತ್ರಿಗಳ ಮಾನ-ಮರ್ಯಾದೆಯಲ್ಲ ಇಡೀ ರಾಜ್ಯದ ಮಾನ-ಮರ್ಯಾದೆ ಹೋಗುತ್ತಿದೆ ಎಂದು ಹೇಳುತ್ತಿದ್ದೇನೆ ನಾನು.

(ಗೊಂದಲ)

**ಶ್ರೀ ಐವಾನ್ ಡಿ'ಸೋಜಾ:-** ಹಿಂದಿನ ಮುಖ್ಯಮಂತ್ರಿಗಳು ಜೈಲಿಗೆ ಹೋಗಲಿಲ್ಲವೆ? ಆಗ ಮಾನ-ಮರ್ಯಾದೆ ಹೋಗಲಿಲ್ಲವೆ?

(ಗೊಂದಲ)

**ಸಭಾಪತಿಯವರು:-** ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

**ಶ್ರೀ ಕೆ.ಎಸ್.ಈಶ್ವರಪ್ಪ:-** "A Minister should –

a) Not accept valuable gifts except from close relatives, and he or members of his family should not accept any gifts at all from any person with whom he may have official dealings,…."

ತುಂಬಾ ಸ್ಪಷ್ಟವಾಗಿದೆ, ಮಂತ್ರಿಗಳು ಇರಬಹುದು, ಮುಖ್ಯಮಂತ್ರಿಗಳಿರಬಹುದು ಬೆಲೆ ಬಾಳುವ ಗಿಫ್ಟ್‌ಗಳನ್ನು ತೆಗೆದುಕೊಳ್ಳಲು ಅಧಿಕಾರವಿಲ್ಲ. ಒಂದು ಡೈಮಂಡ ವಾಚ್ ಉಡುಗರೆಯಾಗಿ ತೆಗೆದುಕೊಂಡಿರುವ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಒಪ್ಪಿಕೊಂಡಿದ್ದಾರೆ.

unedited copy

**ಶ್ರೀ ಕೆ.ಸಿ.ಕೊಂಡಯ್ಯ:-** ಸರ್ಕಾರ ಉತ್ತರ ಕೊಡುವಾಗ ಕ್ಲ್ಯಾರಿಫಿಕೇಶನ್ ಕೇಳಿ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಂತ್ರಿಗಳಾದ ಮೇಲೆ ಉತ್ತರ ಕೊಡಿ ಕೊಂಡಯ್ಯನವರೆ ನೀವು, ಈಗ ಬರಿ ಕೇಳಿ, ಉತ್ತರ ಕೊಡಲು ನಿಮಗೆ ಇನ್ನು ಅಧಿಕಾರವಿಲ್ಲ, ಉತ್ತರ ಕೊಡಲು ಮಂತ್ರಿಗಳಿದ್ದಾರೆ. ಕೇಳುವುದನ್ನು ಕಲಿತುಕೊಳ್ಳಿ. ಇದನ್ನು ನಾನು ಹೇಳುತ್ತಿಲ್ಲ, ನಾನು ವಕೀಲನಲ್ಲ. ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳು ಕಾನೂನಿನ ಪದವೀಧರರು, ಅವರು ಇದನ್ನು ಓದಿರುತ್ತಾರೆ ಎಂದು ಭಾವಿಸುತ್ತೇನೆ. ಗಿಫ್ಟ್ ತೆಗೆದುಕೊಳ್ಳುವ ಸಂದರ್ಭದಲ್ಲಿ ಪಾಪಾ ಅವರಿಗೆ ಇದು ಯಾವುದು ನೆನೆಪಿಗೆ ಬಂದಿರುವುದಿಲ್ಲ. ಕಾನೂನು ಏನು ಹೇಳುತ್ತದೆ ಎನ್ನುವುದು ಅವರಿಗೆ ಗೊತ್ತಿಲ್ಲ. ಇವತ್ತು ಕರ್ನಾಟಕ ರಾಜ್ಯದಲ್ಲಿ ನಡೆಯುತ್ತಿರುವ ಈ ವಿಚಾರದ ಬಗ್ಗೆ ನನಗೂ ಕೂಡಾ ಅವಮಾನ, ಈ ರಾಜ್ಯದ ಪ್ರತಿಯೊಬ್ಬ ಪ್ರಜೆಗೂ ಇದು ಅವಮಾನ.

(ಮುಂದು)

unedited copy

**ಡಾ: ವೀರಣ್ಣ ಮತ್ತಿಕಟ್ಟಿ:–** 5 ವರ್ಷ......

**ಶ್ರೀ ಕೆ.ಎಸ್. ಈಶ್ವರಪ್ಪ:–** ಸದನಕ್ಕೆ ಅವರೇನು ಕುಡಿದು–ಗಿಡಿದು ಬರುತ್ತಾರೆಯೆ? ಅವರಿಗೆ ಏನಾಗಿದೆ, ಮಾತನಾಡುವುದಕ್ಕೆ ಅವಕಾಶ ಕೊಡುವುದಿಲ್ಲ.

(ಗೊಂದಲ)

**ಶ್ರೀ ಅಭಯಚಂದ್ರ ಜೈನ್:–** ಹಣ ಕೌಂಟಿಂಗ್ ಮೆಷಿನ್ ಬಗ್ಗೆ ಹೇಳಲಿ.

(ಗೊಂದಲ)

**ಸಭಾಪತಿಯವರು:–** ಇನ್ನೊಂದು ನಿಮಿಷದಲ್ಲಿ ಮುಗಿಸುತ್ತಾರೆ, ಮಧ್ಯೆ ಬಾಯಿ ಹಾಕಬೇಡಿ.

(ಗೊಂದಲ)

**ಶ್ರೀ ಕೆ.ಎಸ್. ಈಶ್ವರಪ್ಪ:–** ಅವರು ಮಾತನಾಡುವುದಕ್ಕೆ ಬಿಡುವುದಿಲ್ಲ, ನೀವು ಉತ್ತರ ಕೊಡಿ, ಮಾತು ಮಾತಿಗೂ ಉತ್ತರ ಬೇಡ, ಒಟ್ಟಾಗಿ ಉತ್ತರ ಕೊಡಿ.

(ಗೊಂದಲ)

**ಶ್ರೀ ಆರ್.ವಿ. ವೆಂಕಟೇಶ್:–** ಅವರು ಆಗಾಗ ಇಂತಹ ಹೇಳಿಕೆಗಳನ್ನು ಕೊಡುತ್ತಿರುವುದರಿಂದ ಹುಚ್ಚಾಸ್ಪತ್ರೆಗೆ ಕಳುಹಿಸಿ ಚೆಕ್ ಮಾಡಿಸಬೇಕು, ರಾಜ್ಯದ ಜನತೆಗೆ ಅವಮಾನ ಮಾಡಿದ್ದಾರೆ.

**ಶ್ರೀ ಕೆ.ಎಸ್. ಈಶ್ವರಪ್ಪ:–** ಎಲ್ಲಾ ಪತ್ರಿಕೆಗಳಲ್ಲಿಯೂ ಬಂದಿದೆ, " ' ಸಿ.ಎಂ. ಕೈಲಿ ಡೈಮೆಂಡ್ ವಾಚ್,' 'Rs. 70 lakhs worth 'HUBLOT' imported wrist watch' 'ಸಿ.ಎಂ. ಆಸ್ತಿ ವಿವರದಲ್ಲಿ ಪ್ರಸ್ತಾಪವಿಲ್ಲ, ಲೋಕಾಯುಕ್ತಕ್ಕೂ ವಿವರ ನೀಡಿಲ್ಲ,' 'ಸಿದ್ದರಾಮಯ್ಯ ವಾರ್ಷಿಕ ಆದಾಯ ರೂ.40 ಲಕ್ಷ ಮಾತ್ರ,' 'ಸಿ.ಎಂ ಐಷಾರಾಮಿ ವಾಚ್ ಮೂಲದ ತನಿಖೆಗೆ ಲೋಕಾಯುಕ್ತಕ್ಕೆ ದೂರು' " ಎಂದು ಎಲ್ಲಾ ಪತ್ರಿಕೆಗಳಲ್ಲಿ ಬಂದಿದೆ. ನಾನೊಬ್ಬ ಕರ್ನಾಟಕ ರಾಜ್ಯದ ಪ್ರಜೆ. ಒಬ್ಬ ಮುಖ್ಯಮಂತ್ರಿಗಳ ಮೇಲೆ ಆಪಾದನೆ ಬಂದ ಸಂದರ್ಭದಲ್ಲಿ, ಕಾನೂನಿನ

ಕೋಡ್ ಆಫ್ ಕಂಡೆಕ್ಟ್ ಮೀರಿರುವ ಸಂದರ್ಭದಲ್ಲಿ ಕಾನೂನು ಮೀರಿದ್ದಾರೆ ಎಂದರ್ಥವಾಗುತ್ತದೆ. ನೈತಿಕ ಪ್ರಶ್ನೆಯಂತೂ ಅವರಿಗೆ ಇಲ್ಲ, ನಾನು ಅದರ ಬಗ್ಗೆ ಚರ್ಚೆ ಮಾಡುವುದಿಲ್ಲ.

(ಗೊಂದಲ)

**ಶ್ರೀ ಆರ್.ವಿ. ವೆಂಕಟೇಶ್:-** ಅವರು ಏನೆಂದು ಇಡೀ ದೇಶಕ್ಕೆ ಗೊತ್ತಿದೆ. ಲೂಟಿ ಮಾಡಿದ್ದನ್ನು ಎಣಿಸುವುದಕ್ಕೆ ಆಗುವುದಿಲ್ಲ ಎಂದು Counting machine ಇಟ್ಟುಕೊಂಡದ್ದು ಗೊತ್ತಿದೆ. ರಾಜ್ಯದ ಮರ್ಯಾದೆ ಹರಾಜು ಹಾಕಿದ್ದು.......

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ವಿರೋಧ ಪಕ್ಷದ ನಾಯಕರ ಬಗ್ಗೆ ನಾವೆಲ್ಲರೂ ಗೌರವ ಹೊಂದಿದ್ದು, ಅವರು ಆಳುವ ಪಕ್ಷದ ಸದಸ್ಯರಿಗೆ ಕುಡಿದು ಬಂದಿದ್ದಾರೆ ಎಂದು ಸಂಭೋದನೆ ಮಾಡಿದ್ದು ಸಂಸದೀಯ ಪದವೇ? Is it in a good taste? Is it a parliamentary expression?

(ಗೊಂದಲ)

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಧ್ಯೆ ಮಧ್ಯೆ ಬಾಯಿ ಹಾಕಿದರೆ ಏನು ಮಾಡುವುದು?

**ಶ್ರೀ ಆರ್.ವಿ. ವೆಂಕಟೇಶ್:-** ಅವರು ಪದೇ ಪದೇ ನಾಲಿಗೆ ಮೇಲೆ ಹಿಡಿತ ಇಲ್ಲದೇ ಮಾತನಾಡುವುದು ಸರಿಯಲ್ಲ.

**ಶ್ರೀ ಕೆ.ಎಸ್. ಈಶ್ವರಪ್ಪ:-** ಈಗ ನಾನು ಹೇಳಿರುವುದು ಕಡಿಮೆ.

(ಗೊಂದಲ)

**ಸಭಾಪತಿಯವರು:-** ಇದನ್ನು ಏಕೆ ಚರ್ಚೆ ಮಾಡಬೇಕು ಎಂಬ ಬಗ್ಗೆ ಮಾತ್ರ ಹೇಳಿ.

**Sri S.R.PATIL:** I request the Chair for expunction of that word from the proceedings.

**MR.CHAIRMAN:** I will examine the proceedings and do the needful.

unedited copy

**SRI K.S.ISHWARAPPA:** Sir, I am quoting Rule 6(A) of Foreign Contribution Regulation Rules, 2011 which says –

*"Any article gifted to a person for his personal use whose market value in India on the date of such gift does not exceed Rupees Twenty-Five Thousand shall not be a Foreign Contribution within the meaning of Sub-clause (i) of Clause (h) of Sub-section (1) of Section 2"*.

This clearly shows as to what extent he has violated the relevant provisions of law. ವಿದೇಶಿ ವಾಚ್ ಅನ್ನು ಕಾನೂನು ಮೀರಿ ಉಡುಗೊರೆ ತೆಗೆದುಕೊಂಡು ರಾಜ್ಯದ ಜನರಿಗೆ ಅಪಮಾನ ಮಾಡಿದ್ದಾರೆ. ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳು ರಾಜೀನಾಮೆ ಕೊಡಬೇಕೆಂದು ಒತ್ತಾಯ ಮಾಡುತ್ತೇನೆ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ನಿಯಮ 59ರಡಿಯಲ್ಲಿ ನಿಲುವಳಿ ಸೂಚನೆ ಮಂಡಿಸಿದ್ದಾರೆ. ನಾನು ಉತ್ತರ ಕೊಡುವುದಕ್ಕೆ ಪೂರ್ವದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು ಉಪ ಮುಖ್ಯಮಂತ್ರಿಗಳು ಹಾಗೂ ಹಿರಿಯ ಮಂತ್ರಿಗಳಾಗಿ ಕೆಲಸ ಮಾಡಿದ್ದು, ಅವರು ಕುಡಿದು ಬಂದಿದ್ದೀರಾ? ಎಂದು ಸಂಭೋದನೆ ಮಾಡಿರುವ ಶಬ್ದವನ್ನು ಕಡತದಿಂದ ತೆಗೆದುಹಾಕಬೇಕು.

**ಶ್ರೀ ಕೆ.ಎಸ್. ಈಶ್ವರಪ್ಪ:–** ವಿರೋಧ ಪಕ್ಷದ ನಾಯಕರಿಗೆ ಮಾತನಾಡುವುದಕ್ಕೆ ಬಿಡದೇ ಉಪದೇಶ ಮಾಡುತ್ತಾರೆ.

**ಶ್ರೀ ನಾರಾಯಣ ಸಾ. ಬಾಂಡಗೆ:–** ಅವರು ಚಹಾ, ಕಾಫಿ ಕುಡಿದಿರಾ ಎಂದು ಕೇಳಿದ್ದಾರೆ.

**ಶ್ರೀ ಎಸ್.ಆರ್. ಪಾಟೀಲ್:–** ಸಂಸದೀಯ ವ್ಯವಸ್ಥೆಯಲ್ಲಿ ಈ ರೀತಿಯ ಘಟನೆ ಮತ್ತು ಈ ರೀತಿಯ ಶಬ್ದಗಳನ್ನು ಬಳಕೆ ಮಾಡಬಾರದು. It is not in good taste. I request the Chair to kindly expunge it.

**ಸಭಾಪತಿಯವರು:–** ನಾನು ಅದನ್ನು ಗಮನಿಸುತ್ತೇನೆ. I will examine it.

unedited copy

**ಶ್ರೀ ಕೆ.ಎಸ್. ಈಶ್ವರಪ್ಪ:-** ವಿರೋಧ ಪಕ್ಷದ ನಾಯಕರಿಗೆ ಮಾತನಾಡಲು ಅವಕಾಶ ಕೊಡಬೇಕಲ್ಲವೇ?

**ಶ್ರೀ ಎಸ್.ಆರ್. ಪಾಟೀಲ್:-** ವಿರೋಧ ಪಕ್ಷದ ನಾಯಕರನ್ನು ಸ್ವಲ್ಪ ಹಿಡಿತದಲ್ಲಿಟ್ಟುಕೊಳ್ಳಬೇಕು. I agree that he is Hon'ble Leader of the Opposition. However, he is not having unfettered discretionary power to talk like this. ಅವರು ವಿಷಯವನ್ನು ಒಂದು ಗಂಟೆ ಅಲ್ಲದಿದ್ದರೆ 10 ಗಂಟೆ ಮಂಡಿಸಲಿ.

(ಗೊಂದಲ)

**ಶ್ರೀ ಎಸ್.ಆರ್. ಪಾಟೀಲ್:-** ತಾವು ನನಗೆ ಕರೆದಿದ್ದೀರಿ, ಅದರಿಂದ ಮಾತನಾಡುತ್ತಿದ್ದೇನೆ.

**ಶ್ರೀ ಕೆ.ಎಸ್. ಈಶ್ವರಪ್ಪ:-** ನನಗೂ ಆಗ ಕರೆದಿದ್ದರು.

**ಶ್ರೀ ಎಸ್.ಆರ್. ಪಾಟೀಲ್:-** ಅವರ ಸಬ್‌ಮಿಷನ್ ಮುಗಿಯಿತು. ಈಗ ನಾನು ಎದ್ದು ನಿಂತಿದ್ದು, ಮಧ್ಯೆದಲ್ಲಿ ಇನಟೆರೆಪ್ಟ್ ಮಾಡಬಾರದು.

**ಶ್ರೀ ಕೆ.ಎಸ್. ಈಶ್ವರಪ್ಪ:-** ನನಗೆ ಎಷ್ಟರಮಟ್ಟಿಗೆ interrupt ಮಾಡಿದರು?

**ಶ್ರೀ ಎಸ್.ಆರ್. ಪಾಟೀಲ್:-** ವಿರೋಧ ಪಕ್ಷದ ಹಕ್ಕನ್ನು ಕಸಿದುಕೊಳ್ಳುವ ಹಕ್ಕು ಎಲ್ಲ, ಅದು inherent power in this House ಎಂದು ಭಾಷಣ ಮಾಡಿದರು. ಈಗ ತಾವು ನನಗೆ ಮಾತನಾಡಲು ಅವಕಾಶ ಕೊಟ್ಟಾಗ ಹೇಳುವ ವಿಚಾರವನ್ನು ಹೇಳಬಾರದೇ?

**ಶ್ರೀ ಕೆ.ಎಸ್. ಈಶ್ವರಪ್ಪ:-** ಅವರು ಸರಿಯಾಗಿ ನಡೆದುಕೊಂಡರೆ ನಾವು ಸರಿಯಾಗಿ ನಡೆದುಕೊಳ್ಳುತ್ತೇವೆ.

(ಗೊಂದಲ)

unedited copy

**ಡಾ: ವೀರಣ್ಣ ಮತ್ತಿಕಟ್ಟಿ:–** ಅವರ ಮಾತಿನ ಮೇಲೆ ಹಿಡಿತ ಇರಬೇಕು.

**ಶ್ರೀ ಎಸ್.ಆರ್. ಪಾಟೀಲ್:–** ಸದನದ ಘನತೆ ಗೌರವ ಕಾಪಾಡುವಂತಹ ಶಬ್ದಗಳನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಬಳಕೆ ಮಾಡಬೇಕು, ಅವರ ನಾಲಿಗೆ ಮೇಲೆ ಹಿಡಿತ ಇರಬೇಕು ಎಂದು ತಮ್ಮ ಮುಖಾಂತರ ವಿನಂತಿಸುತ್ತೇನೆ.

**ಶ್ರೀ ಕೆ.ಎಸ್. ಈಶ್ವರಪ್ಪ:–** ಅದಕ್ಕೆ ತಕ್ಕಂತೆ ಸರ್ಕಾರ ವಿರೋಧ ಪಕ್ಷಕ್ಕೆ ಮತ್ತು ವಿರೋಧ ಪಕ್ಷದ ನಾಯಕರಿಗೆ ಗೌರವ ಕೊಡುವುದಕ್ಕೆ ಕಲಿತುಕೊಳ್ಳಬೇಕು ಎಂದು ನಾನು ಹೇಳುತ್ತೇನೆ. ನಮ್ಮ ನಾಲಿಗೆ ಹಿಡಿಯುವುದಕ್ಕೆ ಆಗುವುದಿಲ್ಲ, ಅವರು ಮಾಡಿದ ಭ್ರಷ್ಟಾಚಾರಗಳನ್ನು ಹೊರಗೆ ತರಲು ನಮ್ಮ ನಾಲಿಗೆ ಇದೆ.

**ಶ್ರೀ ಎಸ್.ಆರ್. ಪಾಟೀಲ್:–** 5 ವರ್ಷ ಅವರ ಸರ್ಕಾರ ಇದ್ದಾಗ ಇಡೀ ರಾಷ್ಟ್ರದಲ್ಲಿ ಮಾತ್ರವಲ್ಲದೇ ವಿಶ್ವದಲ್ಲಿಯೇ ಅತ್ಯಂತ ಭ್ರಷ್ಟ ಸರ್ಕಾರ ಕರ್ನಾಟಕದಲ್ಲಿದೆ ಎಂದು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಸರ್ಕ್ಯುಲೇಟ್ ಆಗುವ ಪತ್ರಿಕೆಗಳಲ್ಲಿ ಬಂತು.

(ಗೊಂದಲ)

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾಧ್ಯಮ ಮತ್ತು ಟಿ.ವಿ.ಗಳಲ್ಲಿ ಬಂದಿದೆ. ಅವರಿಗೆ ಇನ್ನೂ ಬುದ್ಧಿ ಇಲ್ಲ.

**ಶ್ರೀ ಆರ್.ವಿ. ವೆಂಕಟೇಶ್:–** ಅವರು ಮಾಡಿದ ಅವಾಂತರಗಳು ಎನ್‌ಡಿ ಟಿ.ವಿಯಲ್ಲಿ ಮಾತ್ರವಲ್ಲದೇ ನ್ಯೂಯಾರ್ಕ್ ಟೈಮ್ಸ್‌ನಲ್ಲಿಯೂ ಬಂದಿತ್ತು.

**SRI S.R.PATIL:** There is a saying, 'One who seeks morality from others must first himself practice morality'. ಅಂದರೆ ನೀತಿ ಹೇಳುವವರು ನೀತಿವಂತರಾಗಿರಬೇಕು ಎಂದರ್ಥ. ನಮಗೆ ನೈತಿಕ ಸ್ಥೈರ್ಯ ಇಲ್ಲ, ಹಾಗಿದ್ದಾರೆ ಹೀಗಿದ್ದಾರೆ ಎಂದು ಹೇಳುವುದಲ್ಲ. ಅವರು 5 ವರ್ಷದಲ್ಲಿ ಏನು ಮಾಡಿದ್ದಾರೆ ಎಂದು ಇಡೀ ದೇಶವಲ್ಲದೇ ಜಗತ್ತೇ ನೋಡಿದೆ. ನಿಯಮ 59ರಡಿಯಲ್ಲಿ ನಿಲುವಳಿ ಸೂಚನೆ ಮಂಡಿಸಿದ್ದು, ನಿಯಮ 61ಕ್ಕೆ ನಾನು ರೆಫರ್ ಮಾಡುತ್ತಿದ್ದೇನೆ. ನಿಲುವಳಿ ಸೂಚನೆ ತರುವ

ಹಕ್ಕನ್ನು ನಿರ್ಬಂಧಿಸುವುದರಲ್ಲಿ ಸಾರ್ವಜನಿಕ ಮಹತ್ವವುಳ್ಳ ಒಂದು ಜರೂರು ವಿಷಯದ ಮೇಲೆ ಚರ್ಚೆ ನಡೆಸುವ ಉದ್ದೇಶ ಇದ್ದು, ಇದರಲ್ಲಿ ಸಾರ್ವಜನಿಕ ಮಹತ್ವ ಏನಿದೆ? This is not a matter of urgent public importance. ಮಾನ್ಯ ಮುಖ್ಯಮಂತ್ರಿಗಳು ಒಂದು ವಾಚ್ ಅನ್ನು ಗಿಫ್ಟ್ ತೆಗೆದುಕೊಂಡಿದ್ದಾರೆ ಎಂದು ಹೇಳಿದ್ದಾರೆ. ನಾನು ತಮ್ಮ ಗಮನಕ್ಕೆ ಒಂದು ವಿಚಾರ ತರಬಯಸುತ್ತೇನೆ. ಮೈಸೂರು ಮಹಾರಾಜರು ನಿಜಲಿಂಗಪ್ಪನವರಿಗೆ ಒಂದು ಮೆಗಾವಾಚ್ ಕೊಟ್ಟರು, ಮುಂದೆ ನಿಜಲಿಂಗಪ್ಪನವರು ಆ ವಾಚ್ ಅನ್ನು ವೀರೇಂದ್ರ ಪಾಟೀಲರಿಗೆ ಕೊಟ್ಟರು. ನಂತರ ವೀರೇಂದ್ರ ಪಾಟೀಲರು ದೇವರಾಜ ಅರಸುರವರಿಗೆ ಕೊಟ್ಟರು.

(ಮುಂದು)

unedited copy

(ಸಭಾಪತಿಯವರ ಉಪಸ್ಥಿತಿ)

**ಶ್ರೀ ಎಸ್.ಆರ್.ಪಾಟೀಲ್(ಮುಂದುವರಿದದ್ದು):-**

ಸನ್ಮಾನ್ಯ ಸಭಾಪತಿಯವರೇ, ಮಾನ್ಯ ದೇವರಾಜ ಅರಸುರವರು ಅವರ ನಂತರದ ಮುಖ್ಯಮಂತ್ರಿಗಳಿಗೆ ಆ ವಾಚ್‌ನ್ನು ಪಾಸ್‌ಆನ್ ಮಾಡಲಿಲ್ಲ. ಅದನ್ನು ತೆಗೆದುಕೊಂಡು ಹೋಗಿ ಕ್ಯಾಬಿನೆಟ್ ಹಾಲ್‌ನಲ್ಲಿ ಇರಿಸಿದರು.

**ಶ್ರೀ ಎಸ್.ನಾಗರಾಜ್(ಸಂದೇಶ್ ನಾಗರಾಜ್):-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಿದ್ದರಾಮಯ್ಯನವರು ಪಡೆದುಕೊಂಡಿರುವ ಈ ವಾಚ್ ಅನ್ನು ಮುಂದೆ ಯಾರಿಗೆ ಪಾಸ್‌ಆನ್ ಮಾಡಬಹುದು?

**ಶ್ರೀ ಎಸ್.ಆರ್.ಪಾಟೀಲ್:-** ಸನ್ಮಾನ್ಯ ಸಭಾಪತಿಯವರೇ, ನಾನು ಮಾತನಾಡುವ ಸಂದರ್ಭದಲ್ಲಿ ದಯವಿಟ್ಟು ಅವರು ಮಧ್ಯಪ್ರವೇಶ ಮಾಡುವುದು ಬೇಡ.

**ಸಭಾಪತಿಯವರು:-** ಮಾನ್ಯ ಸಂದೇಶ್ ನಾಗರಾಜ್‌ರವರೇ, ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಮಾತನಾಡಲು ಅವಕಾಶ ಮಾಡಿಕೊಡಿ.

**ಶ್ರೀ ಎಸ್.ನಾಗರಾಜ್(ಸಂದೇಶ್ ನಾಗರಾಜ್):-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರಿಗೆ ಪಾಸ್‌ಆನ್ ಮಾಡಬಹುದೇ?

**ಸಭಾಪತಿಯವರು:-** ಸಭಾ ನಾಯಕರೇ, ವಿಷಯ ಎಲ್ಲಿಗೆ ಹೋಗುತ್ತಿದೆ? ಸದರಿ ವಿಚಾರವನ್ನು ನಿಲುವಳಿ ಸೂಚನೆಯಡಿಯಲ್ಲಿ ತೆಗೆದುಕೊಳ್ಳಬಹುದೇ ಅಥವಾ ಇಲ್ಲವೇ ಎನ್ನುವುದಕ್ಕೆ ಮಾತ್ರ ಸೀಮಿತವಾಗಿ ಮಾತನಾಡಿ.

**ಶ್ರೀ ಎಸ್.ಆರ್.ಪಾಟೀಲ್:-** ಸನ್ಮಾನ್ಯ ಸಭಾಪತಿಯವರೇ, ನನ್ನ ದೃಷ್ಟಿಯಲ್ಲಿ ಇದು ಸಾರ್ವಜನಿಕ ಮಹತ್ವ ಹೊಂದಿರುವ ವಿಚಾರವಲ್ಲ. ಏಕೆಂದರೆ, ಹೊರಗಡೆ ಈ ಬಗ್ಗೆ ಚರ್ಚೆಯಾದ ಸಂದರ್ಭದಲ್ಲಿ ನಮ್ಮ ಮಾನ್ಯ ಮುಖ್ಯಮಂತ್ರಿಗಳು, 'ನನಗೆ ಮಾರ್ಚ್ 31ನೇ ತಾರೀಖಿನವರೆಗೆ ಆದಾಯ ತೆರಿಗೆ ಪಾವತಿ

unedited copy

ಮಾಡುವ ಅವಕಾಶವಿದೆ. ಆ ಸಂದರ್ಭದಲ್ಲಿ ನಾನು ಇದನ್ನು ಸಹ ನಮೂದು ಮಾಡುತ್ತೇನೆ ಮತ್ತು ಲೋಕಾಯುಕ್ತರಿಗೆ ಜೂನ್ ತಿಂಗಳಿನಲ್ಲಿ ಆಸ್ತಿ ವಿವರಗಳನ್ನು ನೀಡುವ ಸಂದರ್ಭದಲ್ಲಿ ಇದನ್ನು ಪರಿಗಣಿಸಲಾಗುತ್ತದೆ. ಇದರ ನಂತರವೂ ಗಿಫ್ಟ್ ಟ್ಯಾಕ್ಸ್ ಕೊಡಬೇಕಾದ ಸಂದರ್ಭ ಬಂದರೆ ಅದನ್ನೂ ಸಹ ಪಾವತಿ ಮಾಡಿ, ನಂತರ ಆ ವಾಚ್‌ನ್ನು ಸರ್ಕಾರಕ್ಕೆ ಒಪ್ಪಿಸುತ್ತೇನೆ' ಎಂದು ಬಹಳ ಸ್ಪಷ್ಟವಾಗಿ ಉತ್ತರವನ್ನು ಕೊಟ್ಟಿದ್ದಾರೆ. ಇಷ್ಟೆಲ್ಲ ಆದ ನಂತರ ಇದರಲ್ಲಿ ಸಾರ್ವಜನಿಕ ಮಹತ್ವವೇನು ಉಳಿದಿದೆ ಎನ್ನುವುದು ನನಗೆ ಅರ್ಥವಾಗುತ್ತಿಲ್ಲ. ಮಾನ್ಯ ವಿರೋಧಪಕ್ಷದ ನಾಯಕರು, 'ಆ ವಾಚ್‌ನ್ನು ಯಾರು ಕೊಟ್ಟರು, ಯಾವ ಕೊಟ್ಟರು ಯಾವ ಕಾರಣಕ್ಕಾಗಿ ಕೊಟ್ಟಿದ್ದಾರೆ?' ಎಂದು ಕೇಳಿದರು. ಮಾನ್ಯ ಮುಖ್ಯಮಂತ್ರಿಗಳೇ ಅದಕ್ಕೆ ಉತ್ತರವನ್ನು ಕೊಟ್ಟಿದ್ದಾರೆ. 'ಡಾ:ಗಿರೀಶ್‌ಚಂದ್ರ ವರ್ಮಾ ಎನ್ನುವವರು 1983ರಿಂದ ನನ್ನ ಗೆಳೆಯರಾಗಿದ್ದಾರೆ. ಅವರು ನಮ್ಮ ಮನೆಗೆ ಬಂದಾಗ ವಾಚ್ ಚೆನ್ನಾಗಿದೆ ಎಂದು ನಾನು ಕೇಳಿದಾಗ, ಅವರು ಧರಿಸಿದ್ದ ಹ್ಯೂಬ್ಲಾಟ್ ಕೈಗಡಿಯಾರವನ್ನು ಬಿಚ್ಚಿ ನನಗೆ ಕೊಟ್ಟಿದ್ದಾರೆ.' ಎಂದು ಹೇಳಿದ್ದಾರೆ. ಈಗಾಗಲೇ ಕಾನೂನು ಪ್ರಕಾರ ಯಾವ ಕ್ರಮವನ್ನು ತೆಗೆದುಕೊಳ್ಳಬೇಕು ಅದನ್ನು ತೆಗೆದುಕೊಂಡಿದ್ದಾರೆ. ಯಾವುದೇ ಕಾನೂನನ್ನೂ ನಮ್ಮ ಮುಖ್ಯಮಂತ್ರಿಗಳು ಉಲ್ಲಂಘನೆ ಮಾಡಿಲ್ಲ. He has abided by the rules and regulations of all the existing rules. ಪ್ರಸ್ತುತ ಜಾರಿಯಲ್ಲಿರುವ ಎಲ್ಲ ಕಾನೂನನ್ನು ಅವರು ಪಾಲನೆ ಮಾಡಿದ್ದಾರೆ. 'ಆದಾಯ ತೆರಿಗೆ ಕಟ್ಟಲಾಗುವುದು, ಲೋಕಾಯುಕ್ತಕ್ಕೆ ವಿವರಣೆ ನೀಡಲಾಗುವುದು, ಗಿಫ್ಟ್ ಟ್ಯಾಕ್ಸ್ ಕಟ್ಟಲಾಗುವುದು ನಂತರ ಅದನ್ನು ಸರ್ಕಾರಕ್ಕೆ ಒಪ್ಪಿಸಲಾಗುವುದು' ಎಂದು ಅವರು ಹೇಳಿದ್ದಾರೆ.

**ಶ್ರೀ ಬಸವರಾಜ ಹೊರಟ್ಟಿ:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಭಾ ನಾಯಕರು ಕಥೆ ಹೇಳುತ್ತಿದ್ದಾರೆ.

**ಶ್ರೀ ಎಸ್.ಆರ್.ಪಾಟೀಲ್:–** ಸನ್ಮಾನ್ಯ ಸಭಾಪತಿಯವರೇ, ಈ ಕಥೆಯನ್ನು ಮೊದಲು ಪ್ರಾರಂಭ ಮಾಡಿರುವುದೇ ಅವರು. So, it is not a matter of public importance at all. ಇದೊಂದು ವೈಯಕ್ತಿಕ ವಿಚಾರವಾಗಿದೆ. ಇದಕ್ಕೆ ಯಾವುದೇ ಸಾರ್ವಜನಿಕ ಮಹತ್ವವಿಲ್ಲ. ಮಾನ್ಯ ಮುಖ್ಯಮಂತ್ರಿಗಳಿಗೆ ಅವರ ಗೆಳೆಯರೊಬ್ಬರು ವೈಯಕ್ತಿಕವಾಗಿ ಉಡುಗೊರೆಯನ್ನು ನೀಡಿರುವ ವಿಚಾರವಾಗಿದೆ. ಆ ಉಡುಗೊರೆಯನ್ನು ಅವರು ತೆಗೆದುಕೊಂಡಿದ್ದಾರೆ. ಕಾನೂನಾತ್ಮಕವಾಗಿ ಯಾವ ಕ್ರಮವನ್ನು ತೆಗೆದುಕೊಳ್ಳಬೇಕೆನ್ನುವುದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಇಡೀ ರಾಜ್ಯದ ಜನತೆಯಲ್ಲ, ಇಡೀ ದೇಶದ ಮತ್ತು ಇಡೀ ಪ್ರಪಂಚದ ಜನರು ಮೆಚ್ಚುವಂತಹ ವಿವರಣೆಯನ್ನು ನೀಡಿದ್ದಾರೆ.

unedited copy

ಸನ್ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದವರಿಗೆ ಈ ರಾಜ್ಯದ ಜ್ವಲಂತ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡುವುದಕ್ಕೆ ಆಸಕ್ತಿ ಇಲ್ಲ. ನಮ್ಮ ರಾಜ್ಯ ಸುಮಾರು 40 ವರ್ಷಗಳಿಂದ ಕಾಣದಂತಹ ಭೀಕರವಾಗಿರುವ ಬರಗಾಲದ ಪರಿಸ್ಥಿತಿಯನ್ನು ಎದುರಿಸುತ್ತಿದೆ. ರೈತರ ಮತ್ತು ಕೃಷಿ ಕಾರ್ಮಿಕರ ಸಮಸ್ಯೆಗಳಿವೆ.

**ಶ್ರೀ ನಾರಾಯಣ ಸಾ ಭಾಂಡಗೆ:-** ಮಾನ್ಯ ಸಭಾಪತಿಯವರೆ, ಹೈಕಮಾಂಡ್.....

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:-** ಸನ್ಮಾನ್ಯ ಸಭಾಪತಿಯವರೇ, ಇವತ್ತಿನ ದಿನವನ್ನು ಲೆಕ್ಕಕ್ಕೆ ತೆಗೆದುಕೊಂಡರೆ ಅಧಿವೇಶನ ಇನ್ನು ಕೇವಲ 5 ದಿನಗಳು ಮಾತ್ರ ನಡೆಯುತ್ತದೆ. ರಾಜ್ಯದ ಜ್ವಲಂತ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ವಿರೋಧ ಪಕ್ಷದವರ ಮಾರ್ಗದರ್ಶನವನ್ನು, ಸಲಹೆ-ಸೂಚನೆಗಳನ್ನು ಕೇಳುವುದಕ್ಕೆ ಸರ್ಕಾರ ತುದಿಗಾಲಿನ ಮೇಲೆ ನಿಂತಿದೆ. ಅವರ ಸಲಹೆ ಸೂಚನೆಗಳನ್ನು ಚಾಚು ತಪ್ಪದೇ ಪಾಲನೆ ಮಾಡುವುದಕ್ಕೆ ಸರ್ಕಾರ ಸದಾ ಸಿದ್ಧವಿದೆ. ಇಂತಹ ವಿಚಾರಗಳನ್ನು ಚರ್ಚೆ ಮಾಡದೇ, ಸಾರ್ವಜನಿಕ ಮಹತ್ವವಿಲ್ಲದ ವಿಚಾರವನ್ನು ತೆಗೆದುಕೊಂಡು ಚರ್ಚೆ ಮಾಡಲು ಹೊರಟಿದ್ದಾರೆ.

ಸನ್ಮಾನ್ಯ ಸಭಾಪತಿಯವರೇ, ಬೆಳಗಾವಿ ಜಿಲ್ಲೆಯಲ್ಲಿ ಈ ವಿಚಾರಕ್ಕೆ ಸಂಬಂಧಪಟ್ಟಂತೆ ಮಾನ್ಯ ಹೆಚ್.ಡಿ.ಕುಮಾರಸ್ವಾಮಿಯವರ ವಿರುದ್ಧ ಒಂದು ದೂರು ದಾಖಲಾಗಿದೆ. " ವಾಚ್ ಪ್ರಕರಣದಲ್ಲಿ ಮಾನ್ಯ ಸಿದ್ಧರಾಮಯ್ಯನವರನ್ನು ಸಿಲುಕಿಸಲು ಜೆ.ಡಿ(ಎಸ್) ರಾಜ್ಯ ಘಟಕದ ಅಧ್ಯಕ್ಷರಾದ ಮಾನ್ಯ ಹೆಚ್.ಡಿ.ಕುಮಾರಸ್ವಾಮಿಯವರು ಒಳಸಂಚು ರೂಪಿಸಿದ್ದಾರೆ" ಎಂದು ಎಂದು ಆರೋಪಿಸಿ ಕೆ.ಪಿ.ಸಿ.ಸಿ. ಮಾಜಿ ಅಧ್ಯಕ್ಷರಾದ ಶ್ರೀ ಶಂಕರ್ ಮನವಳ್ಳಿಯವರು ಈ ಬಗ್ಗೆ ತನಿಖೆ ನಡೆಸುವಂತೆ ಕೋರಿ ಅಲ್ಲಿಯ 3ನೇ ಜೆ.ಎಂ.ಎಫ್.ಸಿ. ನ್ಯಾಯಾಲಯಕ್ಕೆ ಶನಿವಾರ ಖಾಸಗಿ ದೂರು ನೀಡಿದ್ದಾರೆ. ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಮಾನ್ಯ ಹೆಚ್.ಡಿ.ಕುಮಾರಸ್ವಾಮಿ ಮತ್ತು ಕಬ್ಬನ್‌ಪಾರ್ಕ್ ಪೊಲೀಸ್ ಠಾಣೆಯ ತನಿಖಾಧಿಕಾರಿಗಳ ವಿರುದ್ಧ ದೂರು ದಾಖಲಿಸಿದ್ದು, ಮಾರ್ಚ್ 2ನೇ ತಾರೀಖು ವಿಚಾರಣೆಗೆ ಬರಲಿದೆಯೆಂದು ಅವರು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದ್ದಾರೆ. ಪತ್ರಿಕೆಗಳಲ್ಲಿ ಈ ವಿಚಾರ ಪ್ರಕಟವಾಗಿದೆ.

unedited copy

**ಶ್ರೀ ಬಸವರಾಜ ಹೊರಟ್ಟಿ:–** ಸನ್ಮಾನ್ಯ ಸಭಾಪತಿಯವರೇ, ಇಲ್ಲಿ ಮಾನ್ಯ ಹೆಚ್.ಡಿ.ಕುಮಾರಸ್ವಾಮಿಯವರ ಹೆಸರನ್ನು ಯಾಕೆ ಉಲ್ಲೇಖ ಮಾಡಬೇಕು?

**ಶ್ರೀ ಎಸ್.ನಾಗರಾಜ್(ಸಂದೇಶ್ ನಾಗರಾಜ್):–** ಸನ್ಮಾನ್ಯ ಸಭಾಪತಿಯವರೇ, ಕೇಸ್ ಹಾಕಿದ್ದರೆ ಅವರು ಕೋರ್ಟ್‌ಗೆ ಹೋಗುತ್ತಾರೆ. ಆ ವಿಚಾರ ಪ್ರಕಟವಾಗಿರುವ ಪತ್ರಿಕೆಯನ್ನು ಸದನದಲ್ಲಿ ಓದುವಂತಹ ಅಗತ್ಯವೇನಿದೆ? ಅದು ಎಲ್ಲರಿಗೂ ಗೊತ್ತಿರುವ ವಿಚಾರವಾಗಿದೆ. ವಿಷಯಾಂತರ ಮಾಡುವುದಕ್ಕೆ ಈ ರೀತಿ ಹೇಳುತ್ತಿದ್ದಾರೆ.

**(ಗೊಂದಲ)**

**ಶ್ರೀ ಕೆ.ಎಸ್.ಈಶ್ವರಪ್ಪ:–** ಸನ್ಮಾನ್ಯ ಸಭಾಪತಿಯವರೇ, ಸರ್ಕಾರ ಸದರಿ ವಿಚಾರವನ್ನು ತನಿಖೆ ಮಾಡಲು ಸಿ.ಬಿ.ಐ.ನವರಿಗೆ ಒಪ್ಪಿಸಿಬಿಡಲಿ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:–** ಸನ್ಮಾನ್ಯ ಸಭಾಪತಿಯವರೇ, is this the way to behave? I have never expected such type of behavior from the Hon'ble Leader of Opposition. I never expected such a behavior from Sri Horatti.

**(ಗೊಂದಲ)**

**ಶ್ರೀ ಟಿ.ಎ.ಶರವಣ:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳ ವಾಚ್ ಉಡುಗೊರೆಗೆ ಸಂಬಂಧಪಟ್ಟಂತೆ ಮಾತ್ರ ನಾವು ಪ್ರಸ್ತಾಪ ಮಾಡುತ್ತಿರುವುದು, ಅದಕ್ಕೆ ಉತ್ತರ ಕೊಡುವುದನ್ನು ಬಿಟ್ಟು ಅವರು ಬೇರೆ ವಿಚಾರಗಳನ್ನು ಪ್ರಸ್ತಾಪ ಮಾಡುತ್ತಿದ್ದಾರೆ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಸನ್ಮಾನ್ಯ ಸಭಾಪತಿಯವರೇ, ನಮ್ಮ ನಿಲುವಳಿ ಸೂಚನೆಯಲ್ಲಿ ಮಾನ್ಯ ಹೆಚ್.ಡಿ.ಕುಮಾರಸ್ವಾಮಿಯವರ ಬಗ್ಗೆ ಪ್ರಸ್ತಾಪ ಮಾಡಿಯೇ ಇಲ್ಲ. ಇವರ್‍ಯಾಕೆ ಅವರ ಹೆಸರನ್ನು ತರುತ್ತಿದ್ದಾರೆ? ಇವರು ಮಾಡಿರುವ ಕಳ್ಳತನವನ್ನು ಅವರೂ ಮಾಡಬೇಕೇನು?

unedited copy

**ಶ್ರೀ ಎಸ್.ಆರ್.ಪಾಟೀಲ್:-** ಸನ್ಮಾನ್ಯ ಸಭಾಪತಿಯವರೇ, ಆ ಕೈಗಡಿಯಾರದ ವಿಚಾರವಾಗಿ ಬೆಳಗಾವಿಯ 3ನೇ ಜೆ.ಎಂ.ಎಫ್.ಸಿ. ನ್ಯಾಯಾಲಯಲ್ಲಿ ದೂರು ದಾಖಲಾಗಿದೆ. A complaint is pending before the Court. It is in connection with the watch.

**ಶ್ರೀ ಅರುಣ ಶಹಾಪುರ:-** ಸನ್ಮಾನ್ಯ ಸಭಾಪತಿಯವರೇ, ಕೇಸು ದಾಖಲು ಮಾಡಿರುವುದು ಕಾಂಗ್ರೆಸ್ ಕಾರ್ಯಕರ್ತ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಹೆಚ್.ಡಿ.ಕುಮಾರಸ್ವಾಮಿಯವರ ವಿರುದ್ಧ ಕೇಸ್ ದಾಖಲಾಗಿದೆ ಎನ್ನುವ ಪ್ರಶ್ನೆ ಇಲ್ಲಿ ಉದ್ಭವವಾಗುವುದಿಲ್ಲ. ಸದರಿ ಕೈಗಡಿಯಾರಕ್ಕೆ ಸಂಬಂಧಪಟ್ಟಂತೆ ಇದೊಂದು ಸುಳ್ಳು ಹೇಳಿಕೆ ಎನ್ನುವ ಹಿನ್ನೆಲೆಯಲ್ಲಿ ಮತ್ತು ಇದರ ವಿಚಾರಣೆ ನ್ಯಾಯಾಲಯದ ಆಧೀನದಲ್ಲಿರುವುದರಿಂದ ವಿಧಾನ ಪರಿಷತ್ತಿನ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮ 62ರಲ್ಲಿ ನ್ಯಾಯಾಧಿಕರಣಗಳು, ಆಯೋಗಗಳು ಮುಂತಾದವುಗಳ ಮುಂದಿರುವ ವಿಷಯಗಳನ್ನು ಕುರಿತು ಚರ್ಚಿಸಲು ನಿಲುವಳಿ ಸೂಚನೆ ತರುವ ಬಗ್ಗೆ ಏನು ಹೇಳುತ್ತದೆ ಎಂದರೆ;

> **"ಯಾವುದೇ ನ್ಯಾಯಿಕ ಅಥವಾ ನ್ಯಾಯಿಕ ಸ್ವರೂಪದ ಪ್ರಕಾರ್ಯಗಳನ್ನು ನಿರ್ವಹಿಸುತ್ತಿರುವ ಯಾವುದೇ ಶಾಸನಬದ್ಧ ನ್ಯಾಯಾಧಿಕರಣ ಅಥವಾ ಶಾಸನಬದ್ಧ ಪ್ರಾಧಿಕಾರದ ಮುಂದೆ ಅಥವಾ ಯಾವುದೇ ವಿಷಯದ ಬಗ್ಗೆ ವಿಚಾರಣೆ ಅಥವಾ ತನಿಖೆ ನಡೆಸಲು ನೇಮಿತವಾದ ಯಾವುದೇ ಆಯೋಗ ಅಥವಾ ವಿಚಾರಣಾ ನ್ಯಾಯಾಲಯದ ಮುಂದೆ ಬಾಕಿ ಇರುವ ವಿಷಯದ ಮೇಲೆ ಚರ್ಚಿಸುವ ಯಾವುದೇ ನಿಲುವಳಿ ಸೂಚನೆಯನ್ನು ತರಲು ಸಾಮಾನ್ಯವಾಗಿ ಅವಕಾಶವನ್ನು ಕೊಡತಕ್ಕದಲ್ಲ"**

ಎಂದು ಇದೆ. A litigation is pending before the Court. ಆ ವಿಚಾರದ ಮೇಲೆ ಇಲ್ಲಿ ನಾವು ಚರ್ಚೆ ಮಾಡಿದರೆ ಅದು ನ್ಯಾಯಾಧಿಕರಣದ ಮೇಲೆ ಪರಿಣಾಮ ಬೀರಬಹುದು. ಕರ್ನಾಟಕ

unedited copy

ವಿಧಾನ ಪರಿಷತ್ತಿನ ಕಾರ್ಯವಿಧಾನ ಮತ್ತು ನಡವಳಿಕೆ ಎನ್ನುವುದು ನಾವೇ ರೂಪಿಸಿಕೊಂಡಿರುವ ನಿಯಮಗಳಾಗಿವೆ. ಇವುಗಳನ್ನು ಪಾಲನೆ ಮಾಡುವುದು ಸಹ ನಮ್ಮ ಜವಾಬ್ದಾರಿಯಾಗಿದೆ.

**ಶ್ರೀ ಭಾನುಪ್ರಕಾಶ್(ವಿಧಾನಸಭಾ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, ನಿಯಮದ ಅರ್ಧ ಭಾಗವನ್ನು ಮಾತ್ರ ಅವರು ಓದಿದ್ದಾರೆ ಮುಂದಿನ ಭಾಗವನ್ನು ಓದುವುದಕ್ಕೆ ಹೇಳಿ.

**ಶ್ರೀ ಎಸ್.ಆರ್.ಪಾಟೀಲ್:–** ಸನ್ಮಾನ್ಯ ಸಭಾಪತಿಯವರೇ, ನಾನು ಮಾತನಾಡುತ್ತಿದ್ದೇನೆ. ಆದರೆ, ಅವರು ಮಧ್ಯದಲ್ಲಿ ಎದ್ದು ಮಾತನಾಡುತ್ತಿದ್ದಾರೆ. ಅವರಿಗೆ ಮಾತನಾಡಲು ತಾವು ಅವಕಾಶನ್ನು ನೀಡಿದ್ದೀರಾ?

**ಶ್ರೀ ಭಾನುಪ್ರಕಾಶ್:–** ಸನ್ಮಾನ್ಯ ಸಭಾಪತಿಯವರೇ, ಪಾಯಿಂಟ್ ಆಫ್ ಆರ್ಡರ್.

**ಸಭಾಪತಿಯವರು:–** ಮಾನ್ಯ ಭಾನುಪ್ರಕಾಶ್‌ರವರೇ, ತಮಗೆ ಮಾತನಾಡಲು ಆಮೇಲೆ ಅವಕಾಶವನ್ನು ನೀಡುತ್ತೇನೆ ಕುಳಿತುಕೊಳ್ಳಿ. ಮೊದಲು ಸಭಾನಾಯಕರು ತಮ್ಮ ಮಾತುಗಳನ್ನು ಮುಕ್ತಾಯ ಮಾಡಲಿ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:–** ಸನ್ಮಾನ್ಯ ಸಭಾಪತಿಯವರೇ, ನಿಯಮ 62 ಬಹಳ ಸ್ಪಷ್ಟವಾಗಿದೆ. This rule is very much clear like a crystal. This matter is pending before the J.M.F.C., Court.

**ಶ್ರೀ ಕೆ.ಎಸ್.ಈಶ್ವರಪ್ಪ:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಭಾನುಪ್ರಕಾಶ್‌ರವರು ಪಾಯಿಂಟ್ ಆಫ್ ಆರ್ಡರ್ ರೈಸ್ ಮಾಡುತ್ತಿದ್ದಾರೆ. ಆದ್ದರಿಂದ ಅವರಿಗೆ ಮಾತನಾಡಲು ಅವಕಾಶವನ್ನು ಕೊಡಿ.

**ಸಭಾಪತಿಯವರು:–** ಅವರಿಗೂ ಮಾತನಾಡುವುದಕ್ಕೆ ಅವಕಾಶವನ್ನು ಕೊಡುತ್ತೇನೆ. ಮಾನ್ಯ ಸಭಾ ನಾಯಕರು ತಮ್ಮ ಮಾತುಗಳನ್ನು ಮುಗಿಸಲಿ. ಮಾನ್ಯ ಸಭಾ ನಾಯಕರೇ, ನಿಲುವಳಿ ಸೂಚನೆಯಡಿಯಲ್ಲಿ ಸದರಿ ವಿಷಯವನ್ನು ತೆಗೆದುಕೊಳ್ಳಬೇಕೇ ಬೇಡವೇ ಎನ್ನುವುದನ್ನು ಹೇಳಿ ಮುಗಿಸಿ.

unedited copy

**ಶ್ರೀ ಎಸ್.ಆರ್.ಪಾಟೀಲ್:-** ಸನ್ಮಾನ್ಯ ಸಭಾಪತಿಯವರೇ, This matter does not pertain to public importance. In connection with this matter, already a case is pending before the J.M.F.C., Court. ಕರ್ನಾಟಕ ಕಾರ್ಯವಿಧಾನ ಪರಿಷತ್ತಿನ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮ 62ರ ಪ್ರಕಾರ ನ್ಯಾಯಾಲಯದ ಮುಂದಿರುವ ವಿಚಾರದ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶವಿಲ್ಲ. ಮತ್ತೊಂದು ವಿಚಾರವೆಂದರೆ, ಇದು ಸಾರ್ವಜನಿಕ ಮಹತ್ವದ ವಿಚಾರವಾಗಿಲ್ಲ. ಇಂತಹ ವಾಚ್‌ನ ಬಗ್ಗೆ ಹೇಳಬೇಕಾದರೆ, ಈ ನಾಡಿನ ಹೆಸರಾಂತ ಮುಖ್ಯಮಂತ್ರಿಗಳಾದ ಮಾನ್ಯ ನಿಜಲಿಂಗಪ್ಪನವರೂ ವಾಚ್‌ನ್ನು ಉಡುಗೊರೆಯಾಗಿ ಸ್ವೀಕರಿಸಿದ್ದರು ಈ ದೇಶದ ಎಲ್ಲ ಮುಖ್ಯಮಂತ್ರಿಗಳು ಸ್ವೀಕಾರ ಮಾಡಿದ್ದಾರೆ ಎನ್ನುವ ಘಟನೆಗಳನ್ನು ನಾನು ಉಲ್ಲೇಖ ಮಾಡಿದ್ದೇನೆ. I don't want to go into the merits of the case.

**ಶ್ರೀ ಎಸ್.ನಾಗರಾಜ್(ಸಂದೇಶ್ ನಾಗರಾಜ್):-** ಸನ್ಮಾನ್ಯ ಸಭಾಪತಿಯವರೇ, ಉತ್ತರ ಕೊಡುವುದಕ್ಕೆ ಆಗದೇ ಈ ರೀತಿ ಹೇಳುತ್ತಿದ್ದಾರೆ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ:-** ಸನ್ಮಾನ್ಯ ಸಭಾಪತಿಯವರೇ, ಆ ದೃಷ್ಟಿಯಿಂದ ನಿಯಮ 59ರಡಿಯಲ್ಲಿ ಯಾವ ವಿಚಾರವನ್ನು ನಿಲುವಳಿ ಸೂಚನೆಯಡಿಯಲ್ಲಿ ತೆಗೆದುಕೊಳ್ಳಬೇಕೆಂದು ನೋಟಿಸ್ ಕೊಟ್ಟಿದ್ದಾರೆ ಇದು ಸಾರ್ವಜನಿಕ ಹಿತಾಸಕ್ತಿ ಹೊಂದಿರುವ ವಿಚಾರವಲ್ಲ ಮತ್ತು ಆ ಕೈಗಡಿಯಾರಕ್ಕೆ ಸಂಬಂಧಪಟ್ಟಂತೆ ಒಂದು ಮೊಕದ್ದಮೆ ಕೋರ್ಟಿನಲ್ಲಿ ಇರುವುದರಿಂದ, ಈ ವಿಚಾರವನ್ನು ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯಲ್ಲಿರುವ ಯಾವುದೇ ನಿಯಮಗಳಡಿಯಲ್ಲಿ ಚರ್ಚೆಗೆ ಯೋಗ್ಯವಾದ ವಿಷಯವಲ್ಲ. ಆದ್ದರಿಂದ ಸದರಿ ವಿಚಾರವು ಚರ್ಚೆಗೆ ಅರ್ಹವಲ್ಲ, ಇದನ್ನು ಯಾವುದೇ ನಿಯಮದಡಿಯಲ್ಲಿ ಚರ್ಚೆಗೆ ತೆಗೆದುಕೊಳ್ಳಬಾರದೆಂದು ವಿನಂತಿ ಮಾಡುತ್ತಾ, ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತೇನೆ.

unedited copy

**ಶ್ರೀ ಭಾನುಪ್ರಕಾಶ್:–** ಸನ್ಮಾನ್ಯ ಸಭಾಪತಿಯವರೇ, ಅವರು ಓದದೇ ಬಿಟ್ಟಿರುವ ಎರಡನೆಯ ಭಾಗವನ್ನು ನಾನು ಇಲ್ಲಿ ಉಲ್ಲೇಖ ಮಾಡುವುದಕ್ಕೆ ಬಯಸುತ್ತಿದ್ದೇನೆ. ನ್ಯಾಯಾಧೀಕರಣದ ಯಾವುದೇ ದಸ್ತಾವೇಜನ್ನು ಇಲ್ಲಿ ಹಾಜರುಪಡಿಸಿಲ್ಲ. ಯಾರೋ ಒಬ್ಬರು ಪತ್ರಿಕಾ ಹೇಳಿಕೆಯನ್ನು ಕೊಟ್ಟು ಇಂತಹ ದಿನ ಕೇಸ್ ಬರುತ್ತದೆ ಎಂದು ಹೇಳಿದ್ದಾರೆಯೇ ಹೊರತು ಯಾವುದೇ ರೀತಿಯ ದಸ್ತಾವೇಜನ್ನು ಅವರು ಹಾಜರುಪಡಿಸಿಲ್ಲ.

(ಮುಂದುವರಿದಿದೆ)

unedited copy

**ಶ್ರೀ ಭಾನುಪ್ರಕಾಶ್:– (ಮುಂದು)**

ಯಾವುದೇ ನ್ಯಾಯಾಲಯದಿಂದ ಬಂದಿರುವ ಯಾವುದೇ ಅಂಶವನ್ನು ಇವರು ಹೇಳಿಲ್ಲ. ಅವರು ಒಂದು ಹೆಸರನ್ನು ಪ್ರಸ್ತಾಪ ಮಾಡಿದರು. ನಾನು ಆ ಹೆಸರನ್ನು ಶಂಕರ್ ಮನವಳ್ಳಿ ಎಂದು ಕೇಳಿಸಿಕೊಂಡಿದ್ದೇನೆ. ನಾನು ತಪ್ಪಾಗಿದ್ದರೆ, ಅದನ್ನು ಸರಿಪಡಿಸಿ. ಅವರು ನ್ಯಾಯಾಧಿಕರಣದಲ್ಲಿ ಹೇಳಿದ್ದಾರೆ. ಆ ಕೇಸ್ ಬರುತ್ತದೆಂದು ಪತ್ರಿಕಾ ಗೋಷ್ಠಿಯಲ್ಲಿ ಹೇಳಿರುವುದು ಆಧಾರ ಆಗುವುದಾದರೆ, ಪತ್ರಿಕೆಯಲ್ಲಿ ಇಷ್ಟೆಲ್ಲಾ ವಿಚಾರಗಳನ್ನು ಹೇಳಿದ್ದಾರಲ್ಲಾ, FERA ಕಾನೂನು ಉಲ್ಲಂಘನೆಯಾಗಿದೆ, ವಿದೇಶಿ... ಉಲ್ಲಂಘನೆಯಾಗಿದೆ. ನಾವು ಪತ್ರಿಕಾ ಮಾಧ್ಯಮಕ್ಕೆ ಗೌರವವನ್ನು ಕೊಡುವುದು ಬೇಡವೇ?

**ಶ್ರೀ ಆರ್.ವಿ.ವೆಂಕಟೇಶ್ (ಸರ್ಕಾರದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೆ, ಮಾನ್ಯ ಮುಖ್ಯಮಂತ್ರಿಗಳು ನಾನು Income Tax Returns file ಮಾಡುವಾಗ ಮತ್ತು ಲೋಕಾಯುಕ್ತಕ್ಕೆ ಆಸ್ತಿ ವಿವರಗಳನ್ನು ಸಲ್ಲಿಸುವಾಗ ಈ ವಾಚ್‌ನ್ನು ಸಹ ಸೇರಿಸುತ್ತೇನೆಂದು ಹೇಳಿದ್ದಾರೆ.

**ಶ್ರೀ ಭಾನುಪ್ರಕಾಶ್:–** ಮಾನ್ಯ ಸಭಾಪತಿಯವರೆ, ತಾವು ನನಗೆ ಮಾತನಾಡಲು ಅವಕಾಶವನ್ನು ಕೊಟ್ಟಿದ್ದೀರಿ.

**ಶ್ರೀ ಆರ್.ವಿ.ವೆಂಕಟೇಶ್:–** ಇವರ ನಾಯಕರುಗಳು ಸುಮಾರು ಹತ್ತು ವರ್ಷಗಳಾದರೂ ಸಹ ಯಾರಾದರೂ ದುಬಾರಿ ವಾಚ್ ಬಗ್ಗೆ ಫೈಲ್ ಮಾಡಿದ್ದಾರೆಯೇ?

**(ಈ ಹಂತದಲ್ಲಿ ಶ್ರೀ ಡಿ.ವಿ.ಸದಾನಂದಗೌಡ, ಶ್ರೀ ಜಗದೀಶ್ ಶೆಟ್ಟರ್ ಮುಂತಾದ ಬಿಜೆಪಿ ಮುಖಂಡರು ದುಬಾರಿ ವಾಚ್ ಧರಿಸಿ ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿರುವ ಫೋಟೋಗಳನ್ನು ಸದನದಲ್ಲಿ ಪ್ರದರ್ಶನ ಮಾಡಿದರು)**

(ಗೊಂದಲ)

ಸುಮಾರು ಹತ್ತು ವರ್ಷಗಳಾಗಿದೆ. ಈ ವಾಚ್ ಎಲ್ಲಿಂದ ಬಂತು ಎಂದು ಆದಾಯ ತೆರಿಗೆ ಇಲಾಖೆಗೆ ವಿವರಗಳನ್ನು ಸಲ್ಲಿಸಿದ್ದಾರೆಯೇ? ನಮ್ಮ ಮಾನ್ಯ ಮುಖ್ಯಮಂತ್ರಿಗಳು Income Tax Returns

unedited copy

filing ಇರಬಹುದು ಮತ್ತು ಲೋಕಾಯುಕ್ತಕ್ಕೆ ಆಸ್ತಿ ವಿವರಗಳನ್ನು ಸಲ್ಲಿಸುವಾಗ ಇದನ್ನು ಸಲ್ಲಿಸುತ್ತೇನೆಂದು ಹೇಳಿದ್ದಾರೆ.

(ಗೊಂದಲ)

**ಸಭಾಪತಿಯವರು:-** ಮಾನ್ಯ ಭಾನುಪ್ರಕಾಶ್‌ರವರು ತಮ್ಮ ಮಾತುಗಳನ್ನು ಮುಗಿಸಲಿ. ಅವರು ಮಾತನಾಡುವುದು ಬೇಡವೇ? ದಯಮಾಡಿ ಅವರು ಮಾತನಾಡಲು ಬಿಡಿ.

**ಶ್ರೀ ಭಾನುಪ್ರಕಾಶ್:-** ಮಾನ್ಯ ಸಭಾಪತಿಯವರೆ, ತಾವು ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದೀರಿ. ಈ ನಿಲುವಳಿ ಸೂಚನೆ ಬಗ್ಗೆ ಹೇಳುವುದಾದರೆ, ಇದು ಸಾರ್ವಜನಿಕ ಮಹತ್ವದ ವಿಚಾರ ಏಕೆಂದರೆ, ಈ ವಿಚಾರ ಇಡೀ ರಾಜ್ಯದಲ್ಲಿ ಚರ್ಚೆಯಾಗಿದೆ. ತಮ್ಮ ಪೀಠವನ್ನು ಮನವರಿಕೆ ಮಾಡುವಂಥ ಪ್ರಯತ್ನವನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಮಾಡಿದ್ದಾರೆ. ಆದರೆ ಇದಕ್ಕೆ ಉತ್ತರವನ್ನು ಕೊಡಬೇಕಾದರೆ ಸರ್ಕಾರ ಏನು ಹೇಳುತ್ತಿದೆ. ಮೈಸೂರು ಮಹಾರಾಜರು ಕೊಟ್ಟಿರುವಂಥ ಉಡುಗೊರೆಯನ್ನು, ಟ್ರಾನ್ಸ್‌ಫರ್ ಆದ ಕಥೆಯನ್ನು ಹೇಳಿದರು. ಆದರೆ ಇದನ್ನು ಮೈಸೂರು ಮಹಾರಾಜರು ಕೊಟ್ಟಿರುವಂಥಾದ್ದಲ್ಲ. ಆದರೆ ಇಲ್ಲಿ ಒಬ್ಬ ವಿದೇಶಿ ವ್ಯಕ್ತಿ ಒಂದು ವಿದೇಶಿ ವಸ್ತುವನ್ನು ಕೊಟ್ಟಿದ್ದಾನೆ ಎನ್ನುವುದಿದೆ. ಇದನ್ನು ಅಷ್ಟೂ ಪತ್ರಿಕೆಗಳಲ್ಲಿ ಹೇಳಿದ್ದಾರೆ. ನ್ಯಾಯಾಲಯದಲ್ಲಿ ಒಬ್ಬರು ಪತ್ರಿಕಾ ಹೇಳಿಕೆಯನ್ನು ಕೊಟ್ಟು, ನ್ಯಾಯಾಲಯದಲ್ಲಿದೆ ಎಂದು ಹೇಳಿದರೆ ಅದನ್ನು ಸರ್ಕಾರ ಪರಿಗಣಿಸುತ್ತದೆ ಎನ್ನುವುದಾದರೆ, ಇದರ ಬಗ್ಗೆ ಇದು ತಪ್ಪು ಎಂದು ಇಷ್ಟೊಂದು ಹೇಳಿದೆಯಲ್ಲಾ, ಇದನ್ನು ತಾವು ಪರಿಗಣಿಸಿ. ಇದು ಸಾರ್ವಜನಿಕ ಮಹತ್ವದ ವಿಷಯ ಅಲ್ಲವೇ? ಇದು ಏಕೆ ಸಾರ್ವಜನಿಕ ಮಹತ್ವದ ವಿಷಯ ಎಂದು ಹೇಳಿದರೆ, ರಾಜ್ಯದ ಜನ ನಮ್ಮ ಮುಖ್ಯಮಂತ್ರಿಗಳನ್ನು ಅನುಮಾನದ ದೃಷ್ಟಿಯಿಂದ ನೋಡುತ್ತಿದ್ದಾರೆ. ಇದನ್ನು ಅವರು ಪರಿಹಾರ ಮಾಡುವಂಥ ಅವಶ್ಯಕತೆ ಇಲ್ಲವೇ?

**ಶ್ರೀ ಎಸ್.ಆರ್.ಪಾಟೀಲ್ (ಸಭಾನಾಯಕರು):-** ಮಾನ್ಯ ಸಭಾಪತಿಯವರೆ, ಈ ದೇಶದಲ್ಲಿ scandal free ಮುಖ್ಯಮಂತ್ರಿಗಳು ಯಾರಾದರೂ ಇದ್ದಾರೆ ಎಂದರೆ ಅದು ಶ್ರೀಮಾನ್ ಸಿದ್ದರಾಮಯ್ಯನವರು. ಈ ದೇಶದಲ್ಲಿ he is the only one C.M., who is a scandal free C.M., ನಮ್ಮ ಮೂರು ವರ್ಷಗಳ ಅಧಿಕಾರಾವಧಿಯಲ್ಲಿ ಅವರ ಮೇಲೆ ಒಂದು ಕಪ್ಪು ಚುಕ್ಕೆಯೂ

ಸಹ ಇಲ್ಲ. ದೇಶದಲ್ಲಿ he is the only Chief Minister, who is a scandal free Chief Minister. ಇಡೀ ದೇಶದಲ್ಲಿ ಕಪ್ಪುಚುಕ್ಕೆ ರಹಿತವಾದಂಥ, scandal ನಿಂದ ದೂರ ಇರುವಂಥ ಏಕೈಕ ಮುಖ್ಯಮಂತ್ರಿ ಈ ದೇಶದಲ್ಲಿದ್ದಾರೆಂದರೆ, ಅದು ನಮ್ಮ ಮುಖ್ಯಮಂತ್ರಿ ಶ್ರೀಮಾನ್ ಸಿದ್ದರಾಮಯ್ಯನವರು.

(ಗೊಂದಲ)

**ಶ್ರೀ ಕೆ.ಎಸ್.ಈಶ್ವರಪ್ಪ:–** ಇವರು ಅವರಿಗೆ ತರಬೇತಿಯನ್ನು ಕೊಡಲಿ. ತರಬೇತಿಯನ್ನು ಕೊಟ್ಟು ನಂತರ ತಂದು ಇಲ್ಲಿ ಕೂರಿಸಲಿ.

**ಶ್ರೀ ಆರ್.ವಿ.ವೆಂಕಟೇಶ್:–** ಮಾನ್ಯ ಸಭಾಪತಿಯವರೆ, ಪುನಃ ಅವರು ರಾಜಕೀಯ ಭಾಷಣವನ್ನು ಮಾಡುತ್ತಿದ್ದಾರೆ. ಇದು ಸಾರ್ವಜನಿಕ ಮಹತ್ವದ ವಿಷಯವಲ್ಲ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಮತ್ತೆ ತಾವು ಯಾರಿಗೆ ಮಾತನಾಡಲು ಅವಕಾಶವನ್ನು ಕೊಟ್ಟಿದ್ದೀರಿ?

**ಸಭಾಪತಿಯವರು:–** ಈಗ ನಾನು ಈ ಚರ್ಚೆಯನ್ನೇ ಮುಗಿಸಬೇಕು.

(ಗೊಂದಲ)

**ಶ್ರೀ ಆರ್.ವಿ.ವೆಂಕಟೇಶ್:–** ಮಾನ್ಯ ಸಭಾಪತಿಯವರೆ, ಅವರು point of order ಎಂದು ಹೇಳಿ, ರಾಜಕೀಯ ಭಾಷಣವನ್ನು ಮಾಡುತ್ತಿದ್ದಾರೆ.

**Dr. H.C.MAHADEVAPPA** (Minister for Public Works, Ports and Inland Transport):- Mr.Chairman Sir, our Chief Minister is transparent....

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಹದೇವಪ್ಪನವರೆ, ನೀವು ಉತ್ತರವನ್ನು ಕೊಡಬೇಕಾದರೆ ಈ ವಿಚಾರಗಳನ್ನು ಹೇಳಿ. ಮಾನ್ಯ ಸಭಾಪತಿಯವರೆ, ಇದು ನಿಲುವಳಿ ಸೂಚನೆಯೇ ಅಲ್ಲ ಎನ್ನುತ್ತಿದ್ದಾರೆ.

unedited copy

ಹೀಗಿರಬೇಕಾದರೆ ಇವರು ಹೇಗೆ ಉತ್ತರವನ್ನು ಕೊಡುತ್ತಾರೆ? ಇವರು ಉತ್ತರವನ್ನು ಕೊಡುವುದಕ್ಕೆ ಅಧಿಕಾರವಿಲ್ಲ.

**ಶ್ರೀ ಆರ್.ವಿ.ವೆಂಕಟೇಶ್:–** ಮಾನ್ಯ ಸಭಾಪತಿಯವರೆ, ಇವರಿಗೆ ರಾಜ್ಯದ ಯಾವುದೇ ಸಮಸ್ಯೆಗಳ ಬಗ್ಗೆಯಾಗಲಿ ಅಥವಾ ರೈತರ ಸಮಸ್ಯೆ ಬಗ್ಗೆಯಾಗಲಿ ಕಾಳಜಿ ಇಲ್ಲ. ಕೇವಲ ರಾಜಕೀಯ ಪ್ರಚಾರವನ್ನು ಮಾಡಿಕೊಳ್ಳುವುದಕ್ಕೆ ಇವರು ಈ ಸದನವನ್ನು ಬಳಕೆ ಮಾಡಿಕೊಳ್ಳುತ್ತಿದ್ದಾರೆ.

**Dr. H.C.MAHADEVAPPA**:- Mr.Chairman Sir, Adjournment Motion ಗೆ ಇದು ಅರ್ಹವಾಗಿಲ್ಲ. ಆದರೂ ಸಹ ಅವಕಾಶವನ್ನು ಕೊಟ್ಟು ಸಭಾನಾಯಕರು ಮಾತನಾಡುತ್ತಿದ್ದಾರೆ.

**ಶ್ರೀ ಆರ್.ವಿ.ವೆಂಕಟೇಶ್:–** ಮಾನ್ಯ ಸಭಾಪತಿಯವರು ಪಾಯಿಂಟ್ ಆಫ್ ಆರ್ಡರ್‌ಗೆ ಅವಕಾಶವನ್ನು ಕೊಟ್ಟರು. ಅದರ ಬಗ್ಗೆ ಹೇಳುವುದು ಬಿಟ್ಟು ಅವರು ರಾಜಕೀಯ ಭಾಷಣವನ್ನು ಮಾಡುತ್ತಿದ್ದಾರೆ.

**ಸಭಾಪತಿಯವರು:–** ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ನಾನು ನನ್ನ ನಿರ್ಣಯವನ್ನು ಹೇಳುತ್ತೇನೆ.

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, ನಾನಿನ್ನು ಪಾಯಿಂಟ್ ಆಫ್ ಆರ್ಡರ್ ಮಾಡಿಯೇ ಇಲ್ಲ.

**ಶ್ರೀ ಭಾನುಪ್ರಕಾಶ್:–** ಮಾನ್ಯ ಸಭಾಪತಿಯವರೆ, ಮಾನ್ಯ ಸಭಾನಾಯಕರು ನನಗೂ ಸಹ ನಾಯಕರು ಹೌದೋ ಅಲ್ಲವೋ? ಅವರು ನನ್ನ ರಕ್ಷಣೆಗೆ ಬರದೇ ಕೇವಲ ಆಡಳಿತ ಪಕ್ಷದ ರಕ್ಷಣೆಗೆ ಹೋದರೆ ಹೇಗೆ? ನನಗೆ ಮಾತನಾಡಲು ಅವಕಾಶವನ್ನು ಕೊಡಿಸಬೇಕಾಗಿರುವುದು ಮಾನ್ಯ ಸಭಾನಾಯಕರ ಕರ್ತವ್ಯ ಹೌದಲ್ಲವೇ? ನಾನು ವಿರೋಧ ಪಕ್ಷದ ಸದಸ್ಯನಾಗಿರಬಹುದು. ಆದರೆ ಸಭಾನಾಯಕರು ನನಗೂ ಸಹ ಸಭಾನಾಯಕರೆ. ಹಾಗಾಗಿ ಅವರು ನನ್ನ ರಕ್ಷಣೆಗೂ ಸಹ ಬರಬೇಕು. ನಾವೆಲ್ಲಾ ಹೊಸ ಸದಸ್ಯರು, ಅವರಷ್ಟು ಹಳಬರಲ್ಲ. ನಾವು ಮಾತನಾಡುವಾಗ ಕಾನೂನು ಇನ್ನೊಂದೆಲ್ಲವನ್ನು ಬಿಟ್ಟು ಮಾತನಾಡಿ ಎಂದು ಹೇಳಬೇಕು. ಅಷ್ಟನ್ನು ಮಾಡದೇ ಇವರೇ ನನ್ನ ಮೇಲೆ ಬಿದ್ದರೆ ನಾನು ಇನ್ನೆಲ್ಲಿಗೆ ಹೋಗಲಿ? ನಾನು ಹೋಗಿ ಬಾವಿಗೆ ಬೀಳಬೇಕಷ್ಟೇ.

unedited copy

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ಮಾತನಾಡುವುದಕ್ಕೆ ಬಿಡಬೇಕು. ಇವರು ಮಂತ್ರಿಗಳೇ?

**ಶ್ರೀ ಆರ್.ವಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೆ, ಅವರು ಸಾರ್ವಜನಿಕ ಮಹತ್ವದ ವಿಷಯವನ್ನು ಮಾತನಾಡಲಿ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮುಖ್ಯಮಂತ್ರಿಗಳು ಮಾಡಿದ ತಪ್ಪನ್ನು ಮಂತ್ರಿಗಳು ಏಕೆ....

**ಶ್ರೀ ಆರ್.ವಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೆ, ತಾವು ಅವರಿಗೆ ಯಾವುದಕ್ಕಾಗಿ ಮಾತನಾಡಲು ಅವಕಾಶವನ್ನು ಕೊಟ್ಟಿದ್ದೀರಿ.

**ಸಭಾಪತಿಯವರು:-** ಮಾನ್ಯ ಭಾನುಪ್ರಕಾಶ್‌ರವರೆ, ನಿಮ್ಮ ವಾದವನ್ನು ಮುಗಿಸಿಬಿಡಿ.

(ಗೊಂದಲ)

**ಶ್ರೀ ಆರ್.ವಿ.ವೆಂಕಟೇಶ್:-** ಇವರ ಬೇಳೆ ಕಾಳನ್ನು ಬೇಯಿಸಿಕೊಳ್ಳುವುದಕ್ಕಲ್ಲ ಈ ಸದನ ಇರುವುದು. ಅವರು ಮಾನ್ಯ ಸಭಾನಾಯಕರು ಮಾತನಾಡುವುದಕ್ಕೆ ಬಿಡುವುದಿಲ್ಲ.

**ಶ್ರೀ ಗಣೇಶ್ ಕಾರ್ಣಿಕ್ (ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೆ, ಮಾನ್ಯ ಭಾನುಪ್ರಕಾಶ್‌ರವರು ಸಹ ಈ ಸದನದ ಸದಸ್ಯರು. ಅವರಿಗೆ ಮಾತನಾಡುವುದಕ್ಕೆ ಬಿಡುತ್ತಿಲ್ಲ. ಅವರು ಹೇಳುತ್ತಿರುವುದು ಸರಿ ಇದೆ. ಅವರು ಹೊಸ ಸದಸ್ಯರು ಅವರಿಗೆ ನೀವು ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದೀರಿ. ಮಾನ್ಯ ಸಭಾನಾಯಕರು ಮಾತನಾಡಲಿಕ್ಕೆ ಬಿಡುವುದಿಲ್ಲ, ಮಂತ್ರಿಗಳು ಎದ್ದು ನಿಂತು ಅವರಿಗೆ ಮಾತನಾಡುವುದಕ್ಕೆ ಬಿಡುವುದಿಲ್ಲ ಮತ್ತು ಸರ್ಕಾರದ ಮುಖ್ಯ ಸಚೇತಕರು ಸಹ ಅವರಿಗೆ ಮಾತನಾಡುವುದಕ್ಕೆ ಬಿಡುವುದಿಲ್ಲವೆಂದರೆ ಅವರು ಎಲ್ಲಿಗೆ ಹೋಗಬೇಕು, ಅವರು ಹೇಗೆ ಮಾತನಾಡಬೇಕು? ದಯಮಾಡಿ ಅವರಿಗೆ ಮಾತನಾಡಲಿಕ್ಕೆ ಅವಕಾಶವನ್ನು ಮಾಡಿಕೊಡಿ.

unedited copy

**ಶ್ರೀ ಆರ್.ವಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೆ, ಮಾನ್ಯ ಗಣೇಶ್ ಕಾರ್ಣಿಕ್‌ರವರು ಹೇಳಿದ ಮಾತಿಗೆ ಹೇಳುತ್ತಿದ್ದೇನೆ. ವಿರೋಧ ಪಕ್ಷದ ಸದಸ್ಯರು ಪಾಯಿಂಟ್ ಆಫ್ ಆರ್ಡರ್ ಪ್ರಸ್ತಾಪ ಮಾಡಿದರು. ಪಾಯಿಂಟ್ ಆಫ್ ಆರ್ಡರ್ ಮುಗಿಯಿತು. ಪುನಃ ಅವರು ರಾಜಕೀಯ ಪ್ರಶ್ನೆ ಮಾಡುತ್ತಿದ್ದಾರೆ. ಅದಕ್ಕೆ ಹೇಗೆ ಅವಕಾಶವನ್ನು ಮಾಡಿಕೊಡುವುದು? ಅವರು ಪಾಯಿಂಟ್ ಆಫ್ ಆರ್ಡರ್ ಪ್ರಸ್ತಾಪ ಮಾಡಿದಾಗ ಯಾರಾದರೂ ತೊಂದರೆ ಮಾಡಿದರೇನು? ಸುಮ್ಮನೆ ಏನೇನೋ ಮಾತನಾಡಬಾರದು.

**ಶ್ರೀ ಭಾನುಪ್ರಕಾಶ್:-** ಮಾನ್ಯ ಸಭಾಪತಿಯವರೆ, ನಾನು ಪಾಯಿಂಟ್ ಆಫ್ ಆರ್ಡರ್ ಪ್ರಸ್ತಾಪ ಮಾಡಿ ತಮ್ಮ ಗಮನಕ್ಕೆ ತಂದಿದ್ದೇನೆ.

**ಶ್ರೀ ಆರ್.ವಿ.ವೆಂಕಟೇಶ್:-** ಅದು ಅಲ್ಲಿಗೆ ಮುಗಿಯಿತಲ್ಲಾ.

**ಶ್ರೀ ಬಸವರಾಜ ಹೊರಟ್ಟಿ (ಶಿಕ್ಷಕರ ಕ್ಷೇತ್ರ):-** ಮುಖ್ಯ ಸಚೇತಕರ ಕೆಲಸವೇನು? ಸುಮ್ಮನೆ ಕುಳಿತುಕೊಳ್ಳಿ. ನಿಮಗೆ ಬುದ್ಧಿ ಇದೆಯೇ?

**ಶ್ರೀ ಆರ್.ವಿ.ವೆಂಕಟೇಶ್:-** ಅವರು ನನ್ನ ಹೆಸರನ್ನು ಪ್ರಸ್ತಾಪ ಮಾಡಿದ್ದಕ್ಕೆ ನಾನು ಮಾತನಾಡುತ್ತಿದ್ದೇನೆ. ನಾನಿಲ್ಲಿ ಸುಮ್ಮನೆ ಕುಳಿತುಕೊಳ್ಳುವುದಕ್ಕೆ ಬರುವುದಿಲ್ಲ. ನೀವು ಕುಳಿತುಕೊಳ್ಳಿ. ನನಗೆ ನೀವು ಹೇಳಬೇಕಾಗಿಲ್ಲ. ಅವರು ನನ್ನ ಹೆಸರನ್ನು ಪ್ರಸ್ತಾಪ ಮಾಡಿದರು. ಹಾಗಾಗಿ ನಾನು ಎದ್ದು ನಿಂತು ಮಾತನಾಡಿದೆ.

**ಶ್ರೀ ಬಸವರಾಜ ಹೊರಟ್ಟಿ:-** ಸದನದಲ್ಲಿ ನೀವೊಬ್ಬರೇ ಇದ್ದೀರೇನು? ಮಾನ್ಯ ಸಭಾಪತಿಯವರೆ, ಇವರು ಯಾವ ರೀತಿ ಮಾತನಾಡುತ್ತಿದ್ದಾರೆ?

**ಸಭಾಪತಿಯವರು:-** ಭಾನುಪ್ರಕಾಶ್‌ರವರು ಕನ್‌ಕ್ಲೂಡ್ ಮಾಡಲಿ ಬಿಡಿ. ದಯಮಾಡಿ ಯಾರೂ ಸಹ ಮಾತನಾಡಬೇಡಿ.

**ಶ್ರೀ ಆರ್.ವಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೆ, ಅವರು ನನ್ನ ಹೆಸರನ್ನು ಪ್ರಸ್ತಾಪ ಮಾಡಿದ್ದಕ್ಕೆ ನಾನು ಎದ್ದು ನಿಂತು ಮಾತನಾಡಿದೆ. ಇಲ್ಲದಿದ್ದರೆ ನಾನು ಸುಮ್ಮನೆ ಎದ್ದು ನಿಂತು ಮಾತನಾಡುವುದಿಲ್ಲ.

unedited copy

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೆ, ಅವರು ಸರ್ಕಾರದ ಮುಖ್ಯ ಸಚೇತಕರಾಗಿದ್ದಾರೆ. ಹೀಗೆ ಮಾತನಾಡಿದರೆ ಹೇಗೆ?

**ಶ್ರೀ ಆರ್.ವಿ.ವೆಂಕಟೇಶ್:–** ಮಾನ್ಯ ಹೊರಟ್ಟಿಯವರೆ, ನನ್ನ ಹೆಸರನ್ನು ಪ್ರಸ್ತಾಪ ಮಾಡಿದ್ದಕ್ಕೆ ನಾನು ಎದ್ದು ನಿಂತಿದ್ದೇನೆ.

**ಶ್ರೀ ಬಸವರಾಜ ಹೊರಟ್ಟಿ:–** ನೀವೇಕೆ ಹೇಳುತ್ತೀರಿ, ಅವರು ಕುಳಿತುಕೊಂಡ ನಂತರ ನೀವು ಮಾತನಾಡಿ. ಪದ್ಧತಿ ಪ್ರಕಾರ ಮಾತನಾಡಿ.

**ಶ್ರೀ ಆರ್.ವಿ.ವೆಂಕಟೇಶ್:–** ಅದನ್ನು ಹೇಳಬೇಕಾಗಿರುವುದು ಮಾನ್ಯ ಸಭಾಪತಿಯವರು ನೀವು ಹೇಳಬೇಡಿ.

**ಶ್ರೀ ಟಿ.ಎ.ಶರವಣ:–** ಮಾನ್ಯ ವೆಂಕಟೇಶ್‌ರವರೆ, ದಯಮಾಡಿ ಕುಳಿತುಕೊಳ್ಳಿ.

**ಸಭಾಪತಿಯವರು:–** ಭಾನುಪ್ರಕಾಶ್‌ರವರು ಕನ್‌ಕ್ಲೂಡ್ ಮಾಡಲಿ.

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಬಾಪತಿಯವರೆ, ಸದನದಲ್ಲಿ ಏನು ಮಾತನಾಡುತ್ತಿದ್ದಾರೆ. ಅದಕ್ಕೆ ಒಂದು ರೀತಿ–ನೀತಿ ಬೇಡವೇ?

**ಶ್ರೀ ಆರ್.ವಿ.ವೆಂಕಟೇಶ್:–** ಅದನ್ನು ಮಾನ್ಯ ಸಭಾಪತಿಯವರು ಹೇಳಲಿ. ನೀವು ಹೇಳಬೇಕಾಗಿಲ್ಲ.

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಬಾಪತಿಯವರೆ, ಸದನದಲ್ಲಿ ಮಾತನಾಡುವುದಕ್ಕೆ ಒಂದು ರೀತಿ–ನೀತಿ ಇರುತ್ತದೆ. ನಾನು ಸಹ ತಮ್ಮನ್ನು ಕೇಳಿ ಮಾತನಾಡುತ್ತಿದ್ದೇನೆ. ಅವರು ಈ ಸದನದ ಸದಸ್ಯರಿರಬಹುದು. ಹೇಗೆಂದರೆ ಹಾಗೆ ಎದ್ದು ನಿಂತು ಮಾತನಾಡುವ ಹಾಗಿಲ್ಲ. ಅದಕ್ಕೆ ಒಂದು ರೀತಿ–ನೀತಿ ಇರುತ್ತದೆ. ಏನೇನೋ ಮಾತನಾಡಿದರೆ ಹೇಗೆ?

**ಶ್ರೀ ಭಾನುಪ್ರಕಾಶ್:–** ನಾನು ಒಂದೇ ಪಾಯಿಂಟ್ ಹೇಳುತ್ತೇನೆ. ಬೇರೆ ಏನೂ ಇಲ್ಲ.

**ಸಭಾಪತಿಯವರು:–** ಮಾನ್ಯ ವೆಂಕಟೇಶ್‌ರವರೆ, ನೀವು ಅವರ ಬಳಿ ಏಕೆ ಮಾತನಾಡುತ್ತೀರಿ?

**ಶ್ರೀ ಕೆ.ಬಿ.ಶಾಣಪ್ಪ:–** ಮಾನ್ಯ ಸರ್ಕಾರದ ಮುಖ್ಯ ಸಚೇತಕರು ಅವರ ಕಡೆಯ ಸದಸ್ಯರನ್ನು ಕಾಯಬೇಕು, ನಮ್ಮನ್ನೇಕೆ ಕಾಯುತ್ತಿದ್ದಾರೆ.

unedited copy

**ಶ್ರೀ ಆರ್.ವಿ.ವೆಂಕಟೇಶ್:-** ನನ್ನ ಹೆಸರು ಪ್ರಸ್ತಾಪವಾಗಿದ್ದರಿಂದ ನಾನು ಎದ್ದು ನಿಂತೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೆ, ವಿರೋಧ ಪಕ್ಷದ ನಾಯಕರಿಗೆ initiate ಮಾಡುವುದಕ್ಕೆ ಹೇಳಿ ಅವರಿಗೆ ಮಾತನಾಡುವುದಕ್ಕೆ ಸಮಯವನ್ನು ಕೊಟ್ಟಿರಿ. ನಂತರ ಸರ್ಕಾರದಿಂದ ಹೇಳಲು ಅವಕಾಶ ಕೊಟ್ಟಿರಿ.

**ಸಭಾಪತಿಯವರು:-** ಮಾನ್ಯ ಸದಸ್ಯರು ಪಾಯಿಂಟ್ ಆಫ್ ಆರ್ಡರ್ ಪ್ರಸ್ತಾಪ ಮಾಡಿದರು. ಅವರು ತಮ್ಮ ಪಾಯಿಂಟ್ ಆಫ್ ಆರ್ಡರ್‌ನ್ನು ಅರ್ಧ ನಿಮಿಷಗಳಲ್ಲಿ ಮುಗಿಸುತ್ತಾರೆ. ಅವರಿಗೆ ಮುಗಿಸಲು ಬಿಡಿ. ನಂತರ ನಾವು ಮುಂದಕ್ಕೆ ಹೋಗೋಣ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೆ, ತಾವು ರೂಲಿಂಗ್ ಕೊಟ್ಟುಬಿಡಿ.

**ಸಭಾಪತಿಯವರು:-** ಈಗ ಕೊಡುತ್ತೇನೆ.

**ಶ್ರೀ ಭಾನುಪ್ರಕಾಶ್:-** ಮಾನ್ಯ ಸಭಾಪತಿಯವರೆ, ನಾನು ಪಾಯಿಂಟ್ ಆಫ್ ಆರ್ಡರ್‌ನ್ನು ಏನು ಪ್ರಸ್ತಾಪ ಮಾಡಿದ್ದೇನೆ. ಅದರ ಬಗ್ಗೆ ಅರ್ಧ ಭಾಗವನ್ನು ಓದಿ ತಮ್ಮ ಗಮನಕ್ಕೆ ತಂದಿದ್ದೇನೆ. ಸಾರ್ವಜನಿಕ ಮಹತ್ವದ್ದು ಎಂದು ಹೇಳಿದಾಗ ಸರ್ಕಾರದವರು ನ್ಯಾಯಾಲಯದ ವಿಚಾರವನ್ನು ತಂದರಲ್ಲಾ,...

**ಸಭಾಪತಿಯವರು:-** ಅದು ಆಯಿತು ಬಿಡಿ. ಈಗ ಮುಂದಕ್ಕೆ ಹೋಗಿ.

**ಶ್ರೀ ಭಾನುಪ್ರಕಾಶ್:-** ಅದು ಪತ್ರಿಕೆಯಲ್ಲಿ ಬಂದಿದೆ. ಅದೇ ರೀತಿ ಇದು ಸಹ ಪತ್ರಿಕೆಯಲ್ಲಿ ಬಂದಿದೆ ಎಂದು ಹೇಳಿದ್ದೇನೆ. ಇನ್ನು ಮೂರನೆಯದಾಗಿ ಮಾನ್ಯ ಸಭಾನಾಯಕರು ನನಗೂ ಸಹ ಸಭಾನಾಯಕರಿದ್ದಾರೆ. ಮಾನ್ಯ ಸಭಾನಾಯಕರು ಮಾತನಾಡುವುದಕ್ಕೆ ಬಿಡುವುದಿಲ್ಲ. ನಾವು ಬಾವಿಗೆ ಹೋಗಿ ಬಿದ್ದರೆ (ಬಾವಿಯಲ್ಲಿ ಧರಣಿ ಕುಳಿತರೆ) ವಿರೋಧ ಪಕ್ಷದ ನಾಯಕರು ನಮ್ಮನ್ನು ಹೊರಗಡೆಗೆ ಕರೆದುಕೊಂಡು ಬರುತ್ತಾರೆ. ನೀವೂ ಸಹ ನಮ್ಮ ರಕ್ಷಣೆಗೆ ಬರದೇ ಇದ್ದರೆ ನಮಗೆ ಯಾರು ರಕ್ಷಣೆಯನ್ನು ನೀಡಬೇಕು? ನಾವುಗಳು ಹೊಸ ಸದಸ್ಯರು, ನಮಗೆ ಏನೂ ಮಾತನಾಡುವುದಕ್ಕೆ ಬರುವುದಿಲ್ಲ. ನೀವು ಮಂತ್ರಿಗಳು ಎಲ್ಲರೂ ಜೋರಾಗಿ ನಿಂತು ಕೂಗಿದರೆ ನಾವು ಕುಳಿತುಕೊಂಡು ಬಿಡಬೇಕು. ನಮ್ಮನ್ನು ಹೆದರಿಸಿ ಇವರು ಸದನವನ್ನು ನಡೆಸಿದರೆ ಇದು ಯಾವ ನ್ಯಾಯ ಸ್ವಾಮಿ ಮಹದೇವಪ್ಪನವರೆ?

unedited copy

ಮಾನ್ಯ ಸಭಾಪತಿಯವರೆ, ಇವರು ಸಾರ್ವಜನಿಕ ಮಹತ್ವದ ವಿಚಾರವನ್ನೇನು ಪ್ರಸ್ತಾಪ ಮಾಡಿದ್ದಾರೆ ಅದರ ಬಗ್ಗೆ ನಾನು ಪಾಯಿಂಟ್ ಆಫ್ ಆರ್ಡರ್ ಪ್ರಸ್ತಾಪ ಮಾಡಿದ್ದೇನೆ. ತಾವದನ್ನು ಗಮನಿಸಿ ತಮ್ಮ ತೀರ್ಮಾನವನ್ನು ಕೊಡಬೇಕೆಂದು ನಾನು ವಿನಂತಿಯನ್ನು ಮಾಡುತ್ತೇನೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ನಮಗೆ ಉತ್ತರ ಸಮಾಧಾನವಾಗಿಲ್ಲ. ಕಾನೂನಿನ ವಿರುದ್ಧ ಮಾನ್ಯ ಮುಖ್ಯಮಂತ್ರಿಗಳು ಉಡುಗೊರೆಯನ್ನು ತೆಗೆದುಕೊಂಡಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ರಾಜಿನಾಮೆಯನ್ನು ಕೊಡಬೇಕೆಂದು ಒತ್ತಾಯ ಮಾಡಿ ನಾವು ಧರಣಿಯನ್ನು ಮಾಡುತ್ತೇವೆ.

**(ಈ ಹಂತದಲ್ಲಿ ವಿರೋಧ ಪಕ್ಷದ ಎಲ್ಲಾ ಮಾನ್ಯ ಸದಸ್ಯರುಗಳು ಬಾವಿಗೆ ಬಂದು ಧರಣಿಯಲ್ಲಿ ನಿರತರಾದರು)**

**ಡಾ॥ ಹೆಚ್.ಸಿ.ಮಹದೇವಪ್ಪ:-** ಮಾನ್ಯ ಸಭಾಪತಿಯವರೆ, ಇವರು ರಾಜಕೀಯ ಮಾಡುತ್ತಿದ್ದಾರೆ. ವಿಷಯ ಇಲ್ಲದೇ ಇರುವುದಕ್ಕೆ ಜೀವ ತುಂಬಿ ರಾಜಕೀಯ ಲಾಭವನ್ನು ಪಡೆಯುವುದಕ್ಕೆ ಇವರು ಷಡ್ಯಂತ್ರ ಮಾಡುತ್ತಿದ್ದಾರೆ.

**ಶ್ರೀ ಆರ್.ವಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೆ, ಇದನ್ನೇ ರಾಜಕೀಯ ದೊಂಬರಾಟ ಎಂದು ಹೇಳುವುದು.

**ಡಾ॥ ಹೆಚ್.ಸಿ.ಮಹದೇವಪ್ಪ:-** ಪ್ರಾಮಾಣಿಕ ಮುಖ್ಯಮಂತ್ರಿಗಳ ಚಾರಿತ್ರ್ಯ ವಧೆ ಮಾಡಲು ಹೊರಟಿದ್ದಾರೆ. ಇದರಲ್ಲಿ ಯಾವುದೇ ಹುರುಳಿಲ್ಲ. ಇದು ರಾಜಕಾರಣಗೊಳಿಸತಕ್ಕಂಥ ಮತ್ತು ವ್ಯಕ್ತಿಗತ ಚಾರಿತ್ರ್ಯಹರಣ ಮಾಡತಕ್ಕಂಥಾದ್ದು.

(ಮುಂದು)

unedited copy

(ಪೀಠದಲ್ಲಿ ಸಭಾಪತಿಗಳ ಉಪಸ್ಥಿತಿ)

(ಗೊಂದಲ)

**ಡಾ: ಹೆಚ್.ಸಿ.ಮಹದೇವಪ್ಪ:-** ಇವರು ರಾಜಕೀಯ ಮಾಡುವುದಕ್ಕೆ ಹೊರಟ್ಟಿದ್ದಾರೆ. ಪ್ರಾಮಾಣಿಕ ಮುಖ್ಯಮಂತ್ರಿಗಳ ಚಾರಿತ್ರ್ಯಹರಣ ಮಾಡುವುದಕ್ಕೆ ಹೊರಟಿದ್ದಾರೆ, ವಿಷಯ ಏನೂ ಇಲ್ಲದೇ ಇದ್ದರೂ ಅದಕ್ಕೆ ಜೀವ ತುಂಬಿ ಷಡ್ಯಂತ್ರ ಮಾಡುವುದಕ್ಕೆ ಹೊರಟ್ಟಿದ್ದಾರೆ. ಇದರಲ್ಲಿ ಯಾವುದೇ ಹುರುಳಿಲ್ಲ. ರಾಜಕೀಕರಣಗೊಳಿಸುವಂತಹ, ವ್ಯಕ್ತಿಗತ ಚಾರಿತ್ರ್ಯಹರಣ ಮಾಡುವಂತಹ ಕೆಲಸ ಮಾಡುತ್ತಿದ್ದಾರೆ. . .(ಗೊಂದಲ) . . .

**ಶ್ರೀ ಎಸ್.ಆರ್.ಪಾಟೀಲ್:-**ಇಡೀ ಭಾರತ ದೇಶದಲ್ಲಿ ಸ್ಕ್ಯಾಂಡಲ್ ಫ್ರೀ ಗವರ್ನಮೆಂಟ್ ಎಂದು ಎಲ್ಲಿಯಾದರೂ ಇದೆ ಎಂದರೆ ಅದು ಕರ್ನಾಟಕದಲ್ಲಿದೆ. ನಮ್ಮ ಮುಖ್ಯಮಂತ್ರಿಗಳು ಅತ್ಯಂತ ನಿಷ್ಠ, ಪ್ರಾಮಾಣಿಕ, ಜನಪರ ನಿಲುವಿನ, ಶೋಷಿತ ವರ್ಗದವರ ಪರವಾಗಿ ಕೆಲಸ ಮಾಡುವಂತಹ ಅಪರೂಪದ ಮುಖ್ಯಮಂತ್ರಿಗಳಾಗಿದ್ದಾರೆ. ಅವರ ಏಳಿಗೆಯನ್ನು ಸಹಿಸಲಾರದೇ ಇವರು ಹೊಂಚು ಹಾಕಿ ಹೀಗೆ ಹೇಳುತ್ತಿದ್ದಾರೆ, ಮುಖ್ಯಮಂತ್ರಿಗಳ ರಾಜೀನಾಮೆ ಕೇಳುತ್ತಿರುವ ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಇದು ಭೂಷಣವಲ್ಲ.

**ಸಭಾಪತಿಗಳು:-** ಗೌರವಾನ್ವಿತ ಸದಸ್ಯರುಗಳು ಸದನ ನಡೆಸುವುದಕ್ಕೆ ಅನುವು ಮಾಡಿಕೊಡಲು ತಮ್ಮ ತಮ್ಮ ಸ್ಥಾನಗಳಿಗೆ ತೆರಳಬೇಕು ಎಂದು ನಾನು ಮತ್ತೊಮ್ಮೆ ಕೇಳಿಕೊಳ್ಳುತ್ತಿದ್ದೇನೆ.

(ಗೊಂದಲ)

**ಶ್ರೀ ಆರ್.ವಿ.ವೆಂಕಟೇಶ್:-** ಇವರು ರಾಜಕೀಯ ನಾಟಕ ಆಡುತ್ತಿದ್ದಾರೆ . . .(ಗೊಂದಲ)

**ಡಾ:ಹೆಚ್.ಸಿ.ಮಹದೇವಪ್ಪ:-** ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಮಾತನಾಡುವುದಕ್ಕೆ ಅವಕಾಶ ಕೊಡಿ ಎಂದು ಹೇಳಿದಾಗ ನಾವು ನಿಮ್ಮ ಆದೇಶದ ಪ್ರಕಾರ ನಡೆದುಕೊಂಡಿದ್ದೇವೆ. ಈಗ ಇವರು ಪ್ರಚಾರಕ್ಕೋಸ್ಕರ ಈ ರೀತಿ ಮಾಡುತ್ತಿದ್ದಾರೆ. ಒಬ್ಬ ಪ್ರಾಮಾಣಿಕ ಮುಖ್ಯಮಂತ್ರಿಯ ಚಾರಿತ್ರ್ಯಹರಣ ಮಾಡುವಂತಹ ಪ್ರಯತ್ನ ಮಾಡುತ್ತಿದ್ದಾರೆ. ಇವರ ಹತ್ತಿರ ಬೇರೆ ವಿಷಯವಿಲ್ಲ, ಇವರಿಗೆ ರಾಜ್ಯದ ಅಭಿವೃದ್ಧಿ

unedited copy

ಬೇಕಾಗಿಲ್ಲ. ರಾಜ್ಯದ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡಿ ಆ ಕುರಿತು ಸಲಹೆ ಕೊಡುವುದು ಇವರಿಗೆ ಬೇಕಾಗಿಲ್ಲ. ರಾಜಕೀಯ ಮಾಡುವುದರಿಂದ ಏನೂ ಆಗುವುದಿಲ್ಲ . . . .(ಗೊಂದಲ)

**ಸಭಾಪತಿಗಳು:–** ಮಾನ್ಯ ಸದಸ್ಯರುಗಳು ತಮ್ಮ ತಮ್ಮ ಸ್ಥಾನಗಳಿಗೆ ತೆರಳಬೇಕೆಂದು ನಾನು ಮತ್ತೊಮ್ಮೆ ಕೇಳಿಕೊಳ್ಳುತ್ತಿದ್ದೇನೆ.

**ಶ್ರೀಮತಿ ಮೋಟಮ್ಮ:**–ಮಾನ್ಯ ಸಭಾಪತಿಗಳೆ, ತಾವು ಅವರಿಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಿ. ಹಾಗಿದ್ದರೂ ಮತ್ತೆ ಏಕೆ ಧರಣಿ ಮಾಡುತ್ತಿದ್ದಾರೆ? . . . .(ಗೊಂದಲ) ಈಕಡೆಯಿಂದ ಅದಕ್ಕೆ ರಿಪ್ಲೆ ಕೂಡ ಆಗಿದೆ . . .(ಗೊಂದಲ)

**ಸಭಾಪತಿಗಳು:–** ಸದನವನ್ನು ನಾಳೆ ಬೆಳಿಗ್ಗೆ 11 ಗಂಟೆಯವರೆಗೆ ಮುಂದೂಡಿದ್ದೇನೆ.

**(ಸದನವು ಮಧ್ಯಾಹ್ನ 1 ಗಂಟೆ 42 ನಿಮಿಷಕ್ಕೆ**
**ಮುಕ್ತಾಯಗೊಂಡು ಪುನಃ ದಿನಾಂಕ 2ನೇ ಮಾರ್ಚ್**
**ಮಾಹೆ 2016ರ ಬುಧವಾರದಂದು**
**ಬೆಳಿಗ್ಗೆ 11 ಗಂಟೆಗೆ ಸೇರಲು ನಿಶ್ಚಯಿಸಿತು)**

unedited copy